# ದೆಹಲಿ ಕರ್ನಾಟಕ ಸಂಘದ


# ಅಭಿಮತ


ಅಕ್ಟೋಬರ್ 2020
ಬೆಲೆ ರೂ. 1












## ಮೂರು ದಶಕಗಳನ್ನು ಕಂಡ ಅಭಿಮತ

## ಅಗಲಿದ ಮಹನೀಯರಿಗೆ ನುಡಿ ನಮನ



ಡಾ. ಯು.ಪಿ. ಉಪಾಧ್ಯಾಯ



ಎಸ್.ಪಿ. ಬಾಲಸುಬ್ರಹ್ಮಣ್ಯಂ



ಸುರೇಶ್ ಅಂಗಡಿ

# ಶ್ರೀಕಾಂತ್ ಜಿ. ಪೊದ್ದಾರ್ ಅವರ ಕಲಾ ಪ್ರದರ್ಶನ


ದೆಹಲಿಯ ಕೇಂದ್ರ ಲಲಿತ ಕಲಾ ಅಕಾಡೆಮಿಯು ಮಹಾತ್ಮ ಗಾಂಧಿಯವರ ಜನ್ಮ ದಿನದ ಅಂಗವಾಗಿ ದಿನಾಂಕ 05.10.2020 ಮತ್ತು 06.10.2020ರಂದು ಕಲಾ ಶಿಬಿರವನ್ನು ಆಯೋಜಿಸಿತ್ತು. ಈ ಶಿಬಿರದಲ್ಲಿ ಭಾಗವಹಿಸಿದ ದೆಹಲಿಯ ಖ್ಯಾತ ಚಿತ್ರ ಕಲಾವಿದ ಶ್ರೀಕಾಂತ್ ಜಿ. ಪೊದ್ದಾರ್ ಅವರು ತಾವು ರಚಿಸಿದ ಅಪರೂಪದ ಮಹಾತ್ಮ ಗಾಂಧಿಯವರ ಚಿತ್ರಗಳನ್ನು ಪ್ರದರ್ಶಿಸಿದರು.

ಶ್ರೀಕಾಂತ್ ಜಿ. ಪೊದ್ದಾರ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.





## ಮಹಾತ್ಮರ ಸಂದೇಶ



"ಬಲಿಷ್ಠತೆ ಎನ್ನುವುದು ನಿಮ್ಮ ದೈಹಿಕ ಸಾಮರ್ಥ್ಯದಿಂದ ಬರುವಂತದಲ್ಲ; ಅದು ಅದಮ್ಯ ಅಂತಃಶಕ್ತಿಯಿಂದ ಬರುವಂತದ್ದು."

–ಮಹಾತ್ಮ ಗಾಂಧಿ

## ಸೂಚನೆ

### ವಿದ್ಯಾರ್ಥಿ ವೇತನ 2020–21

ದೆಹಲಿ ಕರ್ನಾಟಕ ಸಂಘದಿಂದ 2020–21ನೇ ಸಾಲಿಗಾಗಿ ನೀಡುವ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಕರೆಯಲಾಗಿದೆ.

ಸಂಘದ ಸದಸ್ಯರು ಅರ್ಜಿಯನ್ನು ಸಂಘದ ಕಾರ್ಯಾಲಯದಿಂದ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು 31 ಅಕ್ಟೋಬರ್ 2020ರೊಳಗಾಗಿ ಸಂಘದ ಕಾರ್ಯಾಲಯಕ್ಕೆ ತಲುಪಿಸಬೇಕು.

ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

**ಸೂಚನೆ : NEED CUM PROGRESS ಗೆ ಮಾತ್ರ ವಿದ್ಯಾರ್ಥಿವೇತನ ನೀಡಲಾಗುವುದು.**

ಪ್ರಧಾನ ಕಾರ್ಯದರ್ಶಿ



**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ದೂರವಾಣಿ : 011–26109615 / 26104818**

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳ ಸದಸ್ಯರು
ಚಂದ್ರಶೇಖರ ಜೋಳದರಾಶಿ
ಎಸ್. ಕುಮಾರ್
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

ಸಂಪುಟ 31 । ಸಂಚಿಕೆ 1
ಅಕ್ಟೋಬರ್ 2020

# ಸಂಪಾದಕೀಯ

## ಮೂರು ದಶಕಗಳನ್ನು ಕಂಡ ಅಭಿಮತ

ದೆಹಲಿ ಕರ್ನಾಟಕ ಸಂಘದ ಮುಖವಾಣಿ 'ಅಭಿಮತ' ಮಾಸ ಪತ್ರಿಕೆ 1990ರಲ್ಲಿ ಆರಂಭಗೊಂಡಿತ್ತು. ಭಾರತದ ವಿದೇಶಾಂಗ ಮಂತ್ರಾಲಯದಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದ ಕರ್ನಾಟಕದ ಪ್ರಥಮ ಮಹಿಳೆ ಶ್ರೀಮತಿ ಮುತ್ತಮ್ಮ ಅವರು ಗಾಂಧಿ ಜಯಂತಿಯ ಶುಭ ಸಂದರ್ಭದಲ್ಲಿ ಅಭಿಮತದ ಮೊದಲ ಸಂಚಿಕೆ ಬಿಡುಗಡೆಗೊಳಿಸಿ ಶುಭ ಹಾರೈಸಿದ್ದರು. ಭಾರತದ ಮುದ್ರಣ, ಶ್ರವ್ಯ ಮತ್ತು ದೃಶ್ಯ ಮಾಧ್ಯಮ ಸಂಸ್ಥೆಗಳ ಮುಖ್ಯಸ್ಥರಾಗಿ, ದೇಶದ ನಾಲ್ವರು ಪ್ರಧಾನಿಗಳ ಮಾಧ್ಯಮ ಸಲಹೆಗಾರರಾಗಿದ್ದ ಮಾಜಿ ಅಧ್ಯಕ್ಷ ದಿ. ಐ. ರಾಮಮೋಹನ ರಾವ್ ಅವರು ಅಂದು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು. ಅಂದಿನಿಂದ ನಿರಂತರವಾಗಿ ಪ್ರಕಟಗೊಂಡಿದ್ದ ಅಭಿಮತ ಇದೀಗ ಮೂರು ದಶಕಗಳನ್ನು ಪೂರೈಸಿದೆ. ಇದು ಮೂವತ್ತೊಂದನೇ ಸಂಪುಟದ ಮೊದಲ ಸಂಚಿಕೆ.

ಮಾಜಿ ಅಧ್ಯಕ್ಷ ದಿ. ಎನ್.ಪಿ. ಭಟ್ ಮತ್ತು ಅಂದು ಪ್ರಧಾನ ಕಾರ್ಯದರ್ಶಿಯಾಗಿದ್ದ ಸಿ.ವಿ. ಗೋಪಿನಾಥ್ ಅವರ ಕನಸು, ಪರಿಕಲ್ಪನೆ ಮತ್ತು ಯೋಜನೆಗಳಿಂದ ಅಭಿಮತ ಆರಂಭಗೊಂಡಿತ್ತು. ಹಾಲಿ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಸಂಪಾದಕರಾಗಿ (1990–2003) ಹದಿನಾಲ್ಕು ವರ್ಷಗಳ ಸುದೀರ್ಘ ಕಾಲ ಪತ್ರಿಕೆಯನ್ನು ಹೊರತಂದಿದ್ದರು. ನಂತರ ಶ್ರೀಮತಿ ಉಷಾ ಭರತಾದ್ರಿ (2004–09 ಮತ್ತು 2011–13), ವಸಂತ ಶೆಟ್ಟಿ ಬೆಳ್ಳಾರೆ (2009–10), ಬಾಲಕೃಷ್ಣ ನಾಯ್ಕ್ ಡಿ. (2013–18) ಮತ್ತು ಹಾಲಿ ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ (2019–21) ಅವರು ಅಭಿಮತದ ಪ್ರಧಾನ ಸಂಪಾದಕರಾಗಿ ಪತ್ರಿಕೆಯನ್ನು ಮುನ್ನಡೆಸಿದ್ದಾರೆ. ಹಿರಿಯ ಸಾಹಿತಿಗಳಾದ ದಿ. ಯು.ಆರ್. ಅನಂತಮೂರ್ತಿ, ಡಾ. ಚಂದ್ರಶೇಖರ ಕಂಬಾರ, ಚೆನ್ನವೀರ ಕಣವಿ, ದಿ. ಕಯ್ಯಾರ, ಕಿಞ್ಞಣ್ಣ ರೈ., ದಿ. ಎನ್.ಪಿ. ಭಟ್ ಮೊದಲಾದವರು ಆಯಾ ಕಾಲದಲ್ಲಿ ಪತ್ರಿಕೆಯ ಕುರಿತು ಬರೆದ ಮೆಚ್ಚುಗೆ ಪತ್ರಗಳು ಅದು ಯಶಸ್ವಿಯಾಗಿ ಪ್ರಕಟಗೊಂಡಿದೆ ಎಂಬುದಕ್ಕೆ ನಿದರ್ಶನ ಮಾತ್ರವಲ್ಲ ವಿನೂತನವಾಗಿ ಹೊರತರಲು ಸ್ಫೂರ್ತಿ ನೀಡಿದೆ.

ಅಭಿಮತ ಸಂಪಾದಕ ಬಳಗದಲ್ಲಿ ಇದ್ದು ಅಮೂಲ್ಯ ಕೊಡುಗೆ ನೀಡಿದ ಮಹನೀಯರನ್ನು ಈ ಸಂದರ್ಭದಲ್ಲಿ ನೆನೆಯಲೇ ಬೇಕು. ಡಾ. ಟಿ.ಎಸ್. ಸತ್ಯನಾಥ್, ಬಿ.ಎಸ್. ಚಂದ್ರಶೇಖರ್, ಚೆನ್ನು ಎಸ್. ಮಠದ, ಜಿ.ಆರ್. ರಂಗಸ್ವಾಮಯ್ಯ, ಡಾ. ಎಲ್.ಜಿ. ಸುಮಿತ್ರ, ಕೆ. ಗಣೇಶ್, ಡಾ. ಅಹಲ್ಯಾಚಿಂತಾಮಣಿ, ಡಾ. ಪುರುಷೋತ್ತಮ ಬಿಳಿಮಲೆ, ಶ್ರೀಮತಿ ರೇಣುಕಾ ನಿಡಗುಂದಿ, ಡಾ. ಎಸ್.ಎಲ್. ಭಂಡಾರ್‌ಕರ್, ಮಹಾಬಲೇಶ್ವರ ಭಟ್ ಕೆ., ಸಂತೋಷ್ ಉಪಾಧ್ಯಾಯ, ಡಾ. ಸುಮಂಗಲಾದೇವಿ, ಶ್ರೀಮತಿ ನಂದಿನಿ ಮಲ್ಯ, ಸಾಮ್ರಾಟ್ ಗೌಡ, ಶ್ರೀಮತಿ ಸರೋಜಾ ವಿಜಯ್‌ಕುಮಾರ್, ಚಂದ್ರಶೇಖರ ಎನ್.ಪಿ., ಶ್ರೀಮತಿ ಸವಿತಾ ಇನಾಮದಾರ, ಪ್ರಕಾಶ್ ಶೆಟ್ಟಿ ಉಳೆಪ್ಪಾಡಿ, ಶ್ರೀಮತಿ ಆಶಾಲತಾ ಎಂ., ಸಖಾರಾಮ ಉಪ್ಪೂರು, ಎಸ್. ಕುಮಾರ್ ಮತ್ತು ಚಂದ್ರಶೇಖರ ಜೋಳದರಾಶಿ ಇವರೆಲ್ಲರ ಕಾರ್ಯ ಶ್ಲಾಘನೀಯ.

ಪತ್ರಿಕೆಗೆ ಹೊಸ ವಿನ್ಯಾಸ ನೀಡುವಲ್ಲಿ ಶ್ರಮಿಸಿದ ಪ್ರಕಾಶ್ ಶೆಟ್ಟಿ ಉಳೆಪ್ಪಾಡಿ ಅವರ ಕೊಡುಗೆಯನ್ನು ಮರೆಯುವಂತಿಲ್ಲ. ಅಭಿಮತಕ್ಕೆ ಸದಾ ಕಾಲ ತಾಂತ್ರಿಕ ಸಹಕಾರ ನೀಡುವ ಸಂಘದ ವ್ಯವಸ್ಥಾಪಕರಾದ ಬಾಲಚಂದ್ರ ಬಿ.ಎಸ್., ಶೇಖರ್ ಮತ್ತು ದೇವಯ್ಯನವರ ಕೆಲಸ ದೊಡ್ಡದು. ಈ ಮೂವತ್ತು ವರ್ಷದಲ್ಲಿ ಅನೇಕ ಲೇಖಕರು ತಮ್ಮ ಬರಹಗಳನ್ನು ನೀಡಿದ್ದಾರೆ. ಓದುಗರು ಮೆಚ್ಚಿ ಪ್ರೋತ್ಸಾಹಿಸಿದ್ದಾರೆ. ಪತ್ರಿಕೆಯ ಬೆಳವಣಿಗೆಗೆ ಕಾರಣರಾದ ಇವರೆಲ್ಲರಿಗೂ ನಮ್ಮ ಕೃತಜ್ಞತೆಗಳು.

ಕಳೆದ ಒಂದು ದಶಕದ ಅಭಿಮತದ ಸಂಚಿಕೆಗಳು ಸಂಘದ ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ದೆಹಲಿ ಕರ್ನಾಟಕ ಸಂಘದ ಎಲ್ಲ ಚಟುವಟಿಕೆಗಳ ಸಚಿತ್ರ ವರದಿ ಮತ್ತು ಪ್ರಮುಖ ಘಟನೆಗಳ ವಿವರ ಅಭಿಮತದಲ್ಲಿ ಮುದ್ರಣಗೊಳ್ಳುತ್ತದೆ. ಈ ಕಾರಣದಿಂದ ಹಳೆಯ ಅಭಿಮತದ ಸಂಚಿಕೆಗಳು ವೆಬ್‌ಸೈಟ್‌ನಲ್ಲಿ ಸೇರಬೇಕು. ಸಂಘ ಸಂಗ್ರಹಿಸುವ ಛಾಯಾಚಿತ್ರಗಳು ಮತ್ತು ವೀಡಿಯೋಗಳು ನಶಿಸಿಹೋಗಬಹುದು. ಆದರೆ ಮುದ್ರಣಗೊಳ್ಳುವ ಅಭಿಮತದ ಪುಟಗಳು ಶಾಶ್ವತ ದಾಖಲೆಯಾಗಿವೆ. ಅದರ ಸಂಗ್ರಹ ಮತ್ತು ಸಂರಕ್ಷಣೆ ಇಂದಿನ ತುರ್ತು ಅಗತ್ಯ.

ಈಗಿನ ಕಾರ್ಯಕಾರಿ ಸಮಿತಿಯ ಅವಧಿ ಮುಕ್ತಾಯದ ಹಂತದಲ್ಲಿದೆ. ಚುನಾವಣೆ ಸಮೀಪಿಸುತ್ತಿದೆ. ಸಮಿತಿ ಬದಲಾದಾಗ ಸಂಪಾದಕ ಮಂಡಳ ಬದಲಾಗುತ್ತದೆ. ವ್ಯಕ್ತಿಗಳು ಬದಲಾದರೂ ಸಂಘ ಶಾಶ್ವತ. ಅದರೊಂದಿಗೆ ಅದರ ಮುಖವಾಣಿ 'ಅಭಿಮತ' ಮೂರು ದಶಕ ಮಾತ್ರವಲ್ಲ, ಮುಂದಿನ ನೂರಾರು ದಶಕಗಳ ಕಾಲ ಬೆಳೆಯುತ್ತಾ ಚಿರನೂತನವಾಗಿ ಪ್ರಕಟಗೊಳ್ಳಲಿ ಎಂದು ಹಾರೈಸುತ್ತೇನೆ.

ನಿಮಗೆಲ್ಲರಿಗೂ ನಾಡಹಬ್ಬ ದಸರಾದ ಹಾರ್ದಿಕ ಶುಭಾಶಯಗಳು.

ಡಾ. ಅವನೀಂದ್ರನಾಥ್ ರಾವ್

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 31 ಸಂಚಿಕೆ 1
ಅಕ್ಟೋಬರ್ 2020, ಬೆಲೆ ರೂ. 1

## ನಮ್ಮನಮ್ಮೊಳಗೆ

# ಕೊರೊನಾ ಡೈರಿ: ತೆರೆದುಕೊಳ್ಳುತ್ತಿರುವ ಜಗತ್ತು

ನಿಧಾನವಾಗಿ ದೆಹಲಿಯ ದಿನನಿತ್ಯದ ಜನಜೀವನದ ವ್ಯವಹಾರಗಳು ತೆರೆದುಕೊಳ್ಳುತ್ತಿರುವ ಹಿನ್ನಲೆಯಲ್ಲಿ ಕೊರೊನಾದ ಹಾವಳಿ ಒಂದು ಬಗೆಯ ನಿಯಂತ್ರಣದಲ್ಲಿದ್ದಂತೆ ತೋರುತ್ತಿದೆ. ಸುಮಾರು ಮೂರು ಸಾವಿರದ ಆಸುಪಾಸಿನಲ್ಲಿ ಹೊಸ ಕೋವಿಡ್ ಪೀಡಿತರ ಸಂಖ್ಯೆ ಹೆಚ್ಚುತ್ತಿರುವ ಬಗ್ಗೆ ವರದಿಗಳಿವೆ. ಆದರೆ ಈ ಸಂಖ್ಯೆ ಬರುವ ದಿನಗಳಲ್ಲಿ, ಮುಖ್ಯವಾಗಿ ನವೆಂಬರ ತಿಂಗಳಿನಲ್ಲಿ, ಒಂದು ದಿನದ ಪೀಡಿತರ ಸಂಖ್ಯೆ ಹದಿನೈದು ಸಾವಿರದ ತನಕ ತಲುಪಬಹುದೆಂಬ ವರದಿಗಳು ಬರುತ್ತಿವೆ. ಇದಕ್ಕೆ ಕಾರಣಗಳನ್ನು ಬರಲಿರುವ ಚಳಿಗಾಲ ಮತ್ತು ಹೆಚ್ಚಲಿರುವ ವಾಯುಮಾಲಿನ್ಯಕ್ಕೆ ಕೋವಿಡ್ ಸಂಖ್ಯೆಯನ್ನು ಏರುಮುಖದತ್ತ ತೆಗೆದುಕೊಂಡು ಹೋಗುವ ಎಲ್ಲ ಲಕ್ಷಣಗಳಿವೆಯೆಂದು ಹೇಳಲಾಗುತ್ತಿದೆ. ಜೊತೆಗೆ ನವೆಂಬರನಲ್ಲಿ ಬರಲಿರುವ ಹಬ್ಬದ ದಿನಗಳು ಜನರ ಒಡನಾಟಗಳನ್ನು ಹೆಚ್ಚಿಸುವ ಸಾಧ್ಯತೆಗಳಿರುವುದರಿಂದ ಕೋವಿಡ್‌ನ ಪಸರಿಸುವಿಕೆಯ ಸಾಧ್ಯತೆಗಳ ಬಗ್ಗೆ ತಜ್ಞರು ಮಾತನಾಡುತ್ತಿದ್ದಾರೆ.

ದೇಶದ ಲೆಕ್ಕ ತೆಗೆದುಕೊಂಡರೆ ಕೋವಿಡ್‌ನ ಬಲೆಯಲ್ಲಿ ಬಿದ್ದವರ ಸಂಖ್ಯೆ ಈಗ 70 ಲಕ್ಷದ ಗಡಿಯನ್ನು ತಲುಪುತ್ತಿದ್ದರೆ, ಅದರಿಂದ ಬಿಡುಗಡೆ ಪಡೆದವರ ಸಂಖ್ಯೆ ಅರವತ್ತು ಲಕ್ಷವನ್ನು ದಾಟುತ್ತಿದೆ. ಒಟ್ಟಾರೆ ಈ ಮಹಾಮಾರಿಯಿಂದಾಗಿ ತೀರಿಕೊಂಡವರ ಸಂಖ್ಯೆಯೂ ಸಹ ಲಕ್ಷ ದಾಟಿ, ಇನ್ನೊಂದು ಲಕ್ಷದತ್ತ ಸಾಗುತ್ತಿರುವ ಲಕ್ಷಣಗಳು ಕಾಣಿಸುತ್ತಿವೆ. ಪ್ರತಿದಿನ ಸುಮಾರು ಒಂದು ಸಾವಿರ ಕೋವಿಡ್ ಮೃತ್ಯುಗಳು ಸಂಭವಿಸುತ್ತಿದ್ದರೆ, ಅದರಿಂದ ಭಾದಿತರಾದವರ ಸಂಖ್ಯೆ ಪ್ರತಿದಿನ ಎಪ್ಪತ್ತು ಸಾವಿರವನ್ನು ದಾಟುತ್ತಿದೆ. ಕೆಲ ದಿನಗಳ ಹಿಂದೆ ತೊಂಬತ್ತು ಸಾವಿರವನ್ನು ದಾಟಿ ಲಕ್ಷದತ್ತ ದಾಪುಗಾಲಿಡುತ್ತಿದ್ದ ಈ ಸಂಖ್ಯೆಯನ್ನು ಗಮನಿಸಿದರೆ ಈಗ ಎಪ್ಪತ್ತು ಸಾವಿರದ ಸಂಖ್ಯೆ ನಮಗೆಲ್ಲ ಕಡಿಮೆಯೆಂದೆ ತೋರುತ್ತಿದೆ. ಇವೆಲ್ಲವನ್ನು ಕಂಡಾಗ ನಾವು ಕಳೆದ ಆರು ತಿಂಗಳುಗಳಲ್ಲಿ ಎಲ್ಲಿಂದ ಎಲ್ಲಿಗೆ ಬಂದವೆಂಬುದರ ಬಗ್ಗೆ ವಿವೇಚಿಸಿಕೊಳ್ಳಬೇಕು. ಕಳೆದ ಫೆಬ್ರುವರಿ-ಮಾರ್ಚ್‌ನಲ್ಲಿ ಈ ಕೋವಿಡ್‌ನ ಲೆಕ್ಕಾಚಾರ ಪ್ರಾರಂಭವಾದಾಗ ನಾವೆಲ್ಲ ದಿನನಿತ್ಯ ಅದರಿಂದ ಪೀಡಿತರಾದವರ ಸಂಖ್ಯೆಯನ್ನು ಗಂಭೀರವಾಗಿ ಗಮನಿಸುತ್ತಿದ್ದೆವು. ನೂರು, ಸಾವಿರ, ಐದು ಸಾವಿರ ಹೀಗೆ ಈ ಕೋವಿಡ್‌ನ ಸಂಖ್ಯೆಗಳ ಓಟ ಪ್ರಾರಂಭವಾಗಿ ಲಕ್ಷದತ್ತ ಅದು ದಾಪುಗಾಲಿಡುವಷ್ಟರ ಹೊತ್ತಿಗೆ ಈ ಅಂಕಿಅಂಶಗಳ ಮೇಲೆ ನಮ್ಮ ಆಸಕ್ತಿಗಳೇ ಕಡಿಮೆಯಾಗುತ್ತಿರುವಂತೆ ತೋರುತ್ತಿದೆ. ಸಾವಿನ ಸಂಖ್ಯೆ ಸಾವಿರ ತಲುಪಿದಾಗ ನಾವೆಲ್ಲ 'ಮುಂದೇನಾಗುವುದಪ್ಪ' ಎಂದುಕೊಳ್ಳುವ ಹಾಗೆ ಆತಂಕಗೊಂಡಿದ್ದೆವು. ಈಗ ಅದು ಲಕ್ಷ ದಾಟುತ್ತಿರುವಾಗ ಇದೆಲ್ಲ ಸಹಜವೊ ಎಂಬಂತೆ ನಾವೆಲ್ಲ ಒಂದು ಬಗೆಯ ನಿರ್ಲಿಪ್ತತೆಯ ಭಾವದಲ್ಲಿ ಸಿಲುಕಿಕೊಂಡಿರುವಂತೆ ಕಾಣುತ್ತಿದೆ. ಇದು ಹೀಗೆ ನಡೆದರೆ, ನಾವೆಲ್ಲ ಕೋವಿಡ್‌ನ ಜೊತೆಗೆ ಅದು ತರುವ ಎಲ್ಲ ಸಂಕಷ್ಟಗಳ ಸರಮಾಲೆಯ ಜೊತೆಗೆ ಒಂದಾಗಿ ಬದುಕುವ ಪರಿಯನ್ನು ಕಂಡುಕೊಳ್ಳುವ ಎಲ್ಲ ಲಕ್ಷಣಗಳು ಕಾಣಿಸುತ್ತವೆ.

ಇನ್ನು ಜಗತ್ತಿನಾದ್ಯಂತ ನಡೆಯುತ್ತಿರುವ ಈ ಕೋವಿಡ್ ಕುರಿತಾದ ಔಷಧಿಗಳ ಅವಿಷ್ಕಾರಗಳು ಇಂದು, ನಾಳೆ, ನಾಡಿದ್ದು ಬಂದು ಬಿಡಬಹುದೆಂಬ ಆಶಯದಿಂದ ನಾವು-ನೀವುಗಳು, ದೇಶದೇಶಗಳು ಕುಳಿತಿವೆಯೆಂಬುದು ಸತ್ಯವಾದರೂ ಅದರಿಂದ ನಮಗೆ ಈ ಕೋವಿಡ್‌ನಿಂದ ಸಂಪೂರ್ಣ ಮುಕ್ತಿ ದೊರೆಯುವುದೆಂಬದುರ ಬಗ್ಗೆ ಇನ್ನೂ ಖಚಿತವಾದ ಉತ್ತರಗಳು ದೊರೆತಿಲ್ಲ. 'ವ್ಯಾಕ್ಸಿನ್ ರಾಷ್ಟ್ರೀಯತೆ' ಎಂಬ ಹೊಸ ಪದಾವಳಿ ಈಗ ನಮ್ಮ ನಿಂಘಂಟಿನ ಭಾಗವಾಗುತ್ತಿದೆ. ಅಮೆರಿಕ ಮತ್ತು ಯುರೋಪಿನಂತಹ ದೇಶಗಳು ಈ ಕೋವಿಡ್ ವ್ಯಾಕ್ಸಿನ್‌ನ ಮೊದಲ ಲಾಭ ಪಡೆಯಲು ಕಾದು ಕುಳಿತಿವೆಯೆಂಬುದರ ಬಗ್ಗೆ ಯಾವ ಅನುಮಾನಗಳೂ ಇಲ್ಲ. ಅಮೆರಿಕೆಯ ಅಧ್ಯಕ್ಷರಂತೂ ತಮ್ಮ ಚುನಾವಣಾ ಭಾಷಣದಲ್ಲಿ ಭಾರತ, ಚೀನಾ ಮತ್ತು ಬ್ರೆಜಿಲ್ ದೇಶಗಳು ಕೋವಿಡ್ ಕುರಿತಾದ ಸರಿಯಾದ ಪೀಡಿತರ ಮತ್ತು ಸಾವಿನ ಸಂಖ್ಯೆಗಳನ್ನು ಮರೆಮಾಚುತ್ತಿವೆಯೆಂಬಂತಹ ಮಾತುಗಳನ್ನಾಡುತ್ತಿರುವುದು ಶೋಚನಿಯ. ಸಾಮಾನ್ಯ ಜನತೆಯೆಂಬುದು, ಅಮೆರಿಕೆಯಲ್ಲಿರಲಿ, ಭಾರತದಲ್ಲಿರಲಿ, ಯುರೋಪಿನಲ್ಲಿರಲಿ ಅಥವಾ ಚೀನದಲ್ಲಿರಲಿ ಅವರೆಲ್ಲರ ಸಮಸ್ಯೆಗಳು ಬಹುತೇಕವಾಗಿ ಏಕತೆರನಾಗಿಯೇ ಇರುತ್ತವೆ. ಅವರೆಲ್ಲರಿಗೂ ಒಟ್ಟಾರೆ ಬದುಕಿ ತಮ್ಮ ಜೀವನವನ್ನು ಶಾಂತವಾಗಿ ನಡೆಸಿಕೊಂಡು ಹೋಗಬೇಕೆಂಬ ಆಶಯಗಳಿರುತ್ತವೆ.

ಈ ಕೋವಿಡನ್ನು ಗುಣಪಡಿಸಬಲ್ಲ ಔಷಧಿ ಎಲ್ಲಿಂದಾದರೂ ಬರಲಿ. ಅದು ಬೇಗನೆ ಬಂದರೆ ನಮಗೆಲ್ಲರಿಗೂ ಸಮಾಧಾನ. ಔಷಧಿಯೆಂಬುದು ಇದ್ದರೆ, ಅದು ನಮಗೆ ಇಂದಾದರೂ ಸಿಗಲಿ, ನಾಳೆಯಾದರೂ ಸಿಗಲಿ, ಅದಿದೆಯೆಂದಾದರೆ, ಅದೊಂದೆ ದೊಡ್ಡ ಸಮಾಧಾನ. ಅದೊಂದು ಮರಳುಗಾಡಿನ ಮರೀಚಿಕೆಯಂತಾಗಬಾರದು. ಅದರಲ್ಲೂ ಬಡ ರಾಷ್ಟ್ರಗಳು ಈ ಕೋವಿಡ್ ವಾಕ್ಸಿನ್‌ಗೆ ತೀರಾ ದುಬಾರಿ ಬೆಲೆಯನ್ನು ಕೊಡುವಂತಾಗಬಾರದು. ಈ ಔಷಧಿಯೆಂಬುದು ಬಂದರೆ ಅದು ಎಲ್ಲರ ಕೈಗೆ ಎಟಕುವಂತಿರಬೇಕು. ಅಲ್ಲಿಯ ತನಕ ನಾವೆಲ್ಲ ಈ ಕೋವಿಡ್‌ನ ಪ್ರವಾಹದಿಂದ ಉಸಿರುಗಟ್ಟುವ ವಾತಾವರಣದಲ್ಲಿ ಬದುಕುವಂತಾಗಬಾರದು. ಇದಕ್ಕೆಲ್ಲ ಇನ್ನೊಂದೆರಡು ವರ್ಷಗಳೇ ಬೇಕಾಗಬಹುದೆಂಬುದು ಹಲವು ತಜ್ನರ ಅಭಿಮತ.

ಹಾಗೆಂದು ನಮ್ಮ ದೇಶದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸಿದರೆ, ನಾವ್ಯಾರು ಈ ಕೋವಿಡ್‌ನ ಭಯದಿಂದ ತೆಪ್ಪಗೆ ಕುಳಿತಿಲ್ಲ. ಜಗಳಗಳು, ಹೊಡೆದಾಟಗಳು, ಬೃಹತ್ ಪ್ರದರ್ಶನಗಳು, ಚುನಾವಣೆಗಳು, ಚರ್ಚೆಗಳು...ಎಲ್ಲವೂ ಎಂದಿನಂತೆ ನಡೆಯುತ್ತಿರುವಂತೆ ತೋರುತ್ತಿದೆ. ಮುಖವಾಡವೆಂಬುದು (ಮಾಸ್ಕ್) ಉಳ್ಳವರ ಹವ್ಯಾಸವೆಂಬಂತೆ ಎಲ್ಲಡೆಯಿದೆ. ಇಲ್ಲದವರು ಇದ್ದ ತಮ್ಮ ಹೆಗಲು ಪಂಚೆಯನ್ನೆ ಮುಖಕ್ಕೆ ಬಿಗಿದುಕೊಂಡು ಅದನ್ನೆ ಮುಖವಾಡವೆಂಬಂತೆ ಬಿಗಿದುಕೊಂಡು ಓಡಾಡುತ್ತಿದ್ದಾರೆ. ಎರಡು ವಾರಗಳ ಹಿಂದೆ ನಡೆದ ಸಂಸತ್ತಿನ ಅಧಿವೇಶನವನ್ನು ಕೋವಿಡ್‌ನ ಪಸರಿಸುವಿಕೆಯ ಆತಂಕದಿಂದಾಗಿ ನಾಲ್ಕಾರು ದಿನಗಳ ಮೊದಲೇ ಮುಗಿಸಬೇಕಾಯಿತು. ಸುಮಾರು ಮೂವತ್ತಕ್ಕೂ ಹೆಚ್ಚು ಸಂಸತ್ ಸದಸ್ಯರಿಗೆ ಕೋವಿಡ್‌ನ ಕಿರಣಗಳು ತಟ್ಟಿದ ಬಗ್ಗೆ ವಿವರಗಳು ಬಂದಿವೆ. ಶಾಲಾ ಕಾಲೇಜುಗಳನ್ನು ಪ್ರಾರಂಭಿಸುವುದಕ್ಕೆ ತಯಾರಿಗಳು ನಡೆಯುತ್ತಿವೆ. ಶಾಲೆಯ ದೊಡ್ಡ ತರಗತಿಗಳ ವಿಧ್ಯಾರ್ಥಿಗಳಿಗೆ ಶಾಲೆಗೆ ಬರುವುದರ ಬಗ್ಗೆ ತಾಕೀತು ಮಾಡಲಾಗುತ್ತಿದೆ. ಚಿಕ್ಕ ತರಗತಿಗಳವರಿಗೆ ಇನ್ನೂ ಕೆಲಕಾಲದ ನಂತರ ತರಗತಿಗಳನ್ನು ಪ್ರಾರಂಭಿಸಬೇಕೆಂಬುದರ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ದೆಹಲಿ ವಿಶ್ವವಿದ್ಯಾಲಯದ ಶೈಕ್ಷಣಿಕ ಯಂತ್ರ ತನ್ನ ಮೊದಲ ಕಟ್ ಆಫ್‌ನ್ನು ಸಾರುವುದರ ಮೂಲಕ ತನ್ನ ಕೆಲಸವನ್ನು ಪ್ರಾರಂಭಿಸಿದೆ. ಜೆ.ಎನ್.ಯು. ಸಹ ತನ್ನ ಪ್ರವೇಶ ಪರೀಕ್ಷೆಗಳನ್ನು ಮುಗಿಸಿ ಆನ್‌ಲೈನ್ ಮೂಲಕ ಆಕಾಂಕ್ಷಿಗಳನ್ನು ಸಂದರ್ಶಿಸಲು ತನ್ನ ತಯಾರಿ ಮಾಡಿಕೊಳ್ಳುತ್ತಿದೆ. ಹೊಸ ಶೈಕ್ಷಣಿಕ ವರ್ಷ ನವೆಂಬರ್ ತಿಂಗಳಿನಲ್ಲಿ ಪ್ರಾರಂಭವಾಗುವ ಲಕ್ಷಣಗಳು ಕಾಣಿಸುತ್ತಿವೆ.

ಇವೆಲ್ಲದರ ನಡುವೆ ಜಗತ್ತು 2020 ನ್ನು ಇನ್ನು ಎರಡು ತಿಂಗಳುಗಳಲ್ಲಿ ಮುಗಿಸಿ, 2021 ರತ್ತ ತನ್ನ ಕಾಲನ್ನಿರಿಸಲಿದೆ. ಹೊಸ ವರುಷ ಹೊಸ ಆಶಯಗಳನ್ನು ತರಲೆಂದು ನಾವು ಹಾರೈಸೋಣ. ಮುಂಬರುವ ದಿನಗಳಲ್ಲಿ ಈ ಕೋವಿಡ್‌ನ ಹರಡುವಿಕೆ ಇದೇ ರೀತಿ ನಿಧಾನವಾಗಿ ತನ್ನ ಬಲವನ್ನು ಕಳೆದುಕೊಳ್ಳಲಿ ಎಂದು ಸಹ ಹಾರೈಸೋಣ.

***ಡಾ. ವೆಂಕಟಾಚಲ ಹೆಗಡೆ***
**ಅಧ್ಯಕ್ಷರು**

## ಮುನ್ನೋಟ

ದಸರಾ ಹಬ್ಬದ ಶುಭಾಶಯಗಳನ್ನು ಕೋರುತ್ತಾ ಮಹಾತಾಯಿ ಚಾಮುಂಡೇಶ್ವರಿ ಎಲ್ಲರಿಗೂ ಒಳ್ಳೆಯ ಆರೋಗ್ಯವನ್ನು ನೀಡಲೆಂದು ಆಶಿಸುತ್ತೇನೆ.

ಆತ್ಮೀಯ ಕನ್ನಡ ಬಂಧುಗಳೇ, ಮಾರಕ ರೋಗ ಕೊರೊನ ಸದ್ಯಕ್ಕೆ ಕಡಿಮೆಯಾಗುತ್ತಿಲ್ಲ. ಸಂಘದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿಲ್ಲ. ಆದರೂ ಸಹ ನವೆಂಬರ್ ತಿಂಗಳಲ್ಲಿ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಸ್ಥಳೀಯರಿಗೆ ಪ್ರಾಮುಖ್ಯತೆ ನೀಡುವ ನಿಟ್ಟಿನಲ್ಲಿ ವೆಬ್ ಮುಖಾಂತರ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಯನ್ನು ಮಾಡುತ್ತಿದ್ದೇವೆ.

ತಮಗೆ ತಿಳಿದ ಹಾಗೆ ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಾಲೆ ನಮ್ಮ ದೆಹಲಿಯ ಕನ್ನಡಿಗರ ಎರಡು ಕಣ್ಣುಗಳು ಇದ್ದ ಹಾಗೆ ಅಂತ ಪ್ರತಿ ಬಾರಿ ನಾನು ಹೇಳುತ್ತಾ ಬರುತ್ತಿದ್ದೇನೆ. ಇತ್ತೀಚೆಗೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಹೊಸ ಕಾರ್ಯಕಾರಿ ಸಮಿತಿ ಬಂದ ನಂತರ, ಕನ್ನಡ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಕನ್ನಡ ಶಾಲೆಯ ಮಕ್ಕಳಿಗೆ ಅನುಕೂಲವಾಗಬೇಕೆಂಬ ಸ್ಮಾರ್ಟ್ ಕ್ಲಾಸ್‌ಗಳನ್ನು ಸಂಘವು ಕಳೆದ ಬಾರಿ ಪ್ರಾಯೋಜನೆ ಮಾಡಿತ್ತು. ಕನ್ನಡ ಮಕ್ಕಳು ಶಾಲೆಗೆ ಜಾಸ್ತಿ ಬರುತ್ತಿರುವುದರಿಂದ ಈ ಬಾರಿಯೂ ಸಹ ಕರ್ನಾಟಕ ಸಂಘಕ್ಕೆ ಇನ್ನು ಹೆಚ್ಚಿನ ಸ್ಮಾರ್ಟ್ ಕ್ಲಾಸ್‌ಗಳನ್ನು ಪ್ರಾಯೋಜನೆ ಮಾಡಬೇಕೆಂದು ಮನವಿಯನ್ನು ಸಮಿತಿ ನೀಡಿತ್ತು. ಇದಕ್ಕೆ ಒಪ್ಪಿಗೆಯನ್ನು ನೀಡುತ್ತಾ ಈ ಬಾರಿಯೂ ಸಹ ಇನ್ನು ಹತ್ತು ಹೆಚ್ಚುವರಿ ಸ್ಮಾರ್ಟ್ ಕ್ಲಾಸ್‌ಗಳ ಆಯೋಜನೆಗೆ ಹತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೇವೆ. ಈ ಮೂಲಕ ಕನ್ನಡ ಮಕ್ಕಳ ಪ್ರಯೋಜನಕ್ಕಾಗಿ, ಶಾಲೆಯ ಅಭಿವೃದ್ಧಿಗಾಗಿ ಸಂಘದ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿಯ ನಿರ್ಣಯದಂತೆ ಈ ಎಲ್ಲಾ ಕಾರ್ಯವನ್ನು ಹಮ್ಮಿಕೊಂಡಿದ್ದೇವೆ. ಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರು ಬರಬೇಕು ಮತ್ತು ಶಾಲೆಯ ಅಭಿವೃದ್ಧಿ ಆಗಬೇಕು ಎಂಬುದು ನಮ್ಮ ಅಭಿಲಾಷೆ.

ಬರುವ ನವೆಂಬರ್ ತಿಂಗಳಲ್ಲಿ ವೆಬ್‌ನಲ್ಲಿ ಸಂಘದ ಸರ್ವ ಸದಸ್ಯರ ಸಭೆಯನ್ನು ಆಯೋಜಿಸುವ ಪ್ರಯತ್ನ ಮಾಡುತ್ತಿದ್ದೇವೆ. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಯಾವ ರೀತಿಯಲ್ಲಿ ಆಯೋಜಿಸಬಹುದು ಮತ್ತು ಸದಸ್ಯರಿಗೆ ಅನುಕೂಲವಾಗುವ ಯೋಜನೆಗಳ ವಿವರವನ್ನು ಮುಂದಿನ ದಿನಗಳಲ್ಲಿ ತಿಳಿಸುತ್ತೇವೆ.

ಆತ್ಮೀಯರೇ ನವೆಂಬರ್ ತಿಂಗಳಲ್ಲಿ ಇನ್ನೂ ಹೆಚ್ಚು ಕೊರೊನ ಹರಡುವ ಸಂಭವವಿದೆ. ದಯವಿಟ್ಟು ಮಾಸ್ಕ್, ಸ್ಯಾನಿಟೈಸರ್‌ಗಳನ್ನು ಬಳಸಿ ಮತ್ತು ಅಂತರವನ್ನು ಕಾಪಾಡಿಕೊಳ್ಳಿ.

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*

# ಹಿರಿಯ ರಂಗಕರ್ಮಿ ಬಿ.ವಿ. ರಾಜಾರಾಮ್ ಸಂಘಕ್ಕೆ ಭೇಟಿ



**ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷ, ಹಿರಿಯ ರಂಗಕರ್ಮಿ ಬಿ.ವಿ. ರಾಜಾರಾಮ್ (ಬಲಬದಿ) ಮತ್ತು ಆಕಾಶವಾಣಿಯ ಹಿರಿಯ ಉದ್ಘೋಷಕ ಶಶಿಧರ ನರೇಂದ್ರ ಅವರು ದೆಹಲಿ ಕರ್ನಾಟಕ ಸಂಘಕ್ಕೆ ದಿನಾಂಕ 08.10.2020ರಂದು ಭೇಟಿ ನೀಡಿದರು. ಸಂಘದ ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ ಅವರು ಉಪಸ್ಥಿತರಿದ್ದರು.**

# ಅಗಲಿದ ಮಹಾ ಮಹೋಪಾಧ್ಯಾಯ ಡಾ. ಯು.ಪಿ. ಉಪಾಧ್ಯಾಯ


'ಮಹಾ ಮಹೋಪಾಧ್ಯಾಯ' ಇದು ಕಾಂತಾವರ ಕನ್ನಡ ಸಂಘವು ಈ ಬಿರುದಿಗೆ ತಕ್ಕ ವ್ಯಕ್ತಿತ್ವ ಹೊಂದಿದ್ದ ಡಾ. ಉಳಿಯಾರು ಪದ್ಮನಾಭ ಉಪಾಧ್ಯಾಯರ ಜೀವನ ಸಾಧನೆಗಳ ಕೃತಿಗೆ ನೀಡಿದ ಶೀರ್ಷಿಕೆ. ಕಾಂತಾವರ ಕನ್ನಡ ಸಂಘವು ಉಪಾಧ್ಯಾಯರ ಹೆಸರಿನಲ್ಲಿ ಕೊಡಮಾಡುವ ಪ್ರಶಸ್ತಿಯ ಹೆಸರೂ 'ಮಹಾ ಮಹೋಪಾಧ್ಯಾಯ ಪ್ರಶಸ್ತಿ'. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಖ್ಯಾತಿಯ ಭಾಷಾಶಾಸ್ತ್ರಜ್ಞ, ನಿಘಂಟು ತಜ್ಞ, ಜಾನಪದ ಶಾಸ್ತ್ರಜ್ಞ, ಬಹುಭಾಷಾ ಪ್ರವೀಣ ಡಾ. ಯು.ಪಿ. ಉಪಾಧ್ಯಾಯರು ದಿನಾಂಕ 17.07.2020 ರಂದು ನಮ್ಮನ್ನು ಅಗಲಿದ್ದಾರೆ. ಅವರ ಸಹಚರಿಯಾಗಿದ್ದು ಪತಿಯ ಎಲ್ಲ ಸಾಧನೆಗಳಿಗೆ ಪೂರಕಿಯಾಗಿ, ಪ್ರೇರಕಿಯಾಗಿ, ಪೋಷಕಿಯಾಗಿ, ಅವರೊಂದಿಗೆ ತಾನೂ ಬೆಳೆದು, 'ಸಾಧನಾ ಶೀಲೆ ಈ ಸುಶೀಲೆ' ಅನ್ನಿಸಿಕೊಂಡ ಡಾ. ಸುಶೀಲಾ ಉಪಾಧ್ಯಾಯರು 6 ವರ್ಷಗಳ ಹಿಂದೆ ನಮ್ಮನ್ನಗಲಿರುತ್ತಾರೆ. ಭಾರತೀಯ ಭಾಷಾಶಾಸ್ತ್ರದ ಕ್ಷೇತ್ರಕ್ಕೆ ಹಾಗೂ ತುಳು ಜಾನಪದ ಕ್ಷೇತ್ರಕ್ಕೆ ಈ ದಂಪತಿಗಳ ಅಗಲಿಕೆ ಒಂದು ಭರಿಸಲಾರದ ನಷ್ಟ. ಸಂಸ್ಕೃತ, ಕನ್ನಡ, ತುಳು, ಭಾಷೆಗಳ ಬಗ್ಗೆ ಭಾಷಾ ಶಾಸ್ತ್ರೀಯ ದೃಷ್ಟಿಯಿಂದ ಅಧಿಕೃತವಾಗಿ ಮಾತಾಡಬಲ್ಲವರಾಗಿದ್ದ ಈ ದಂಪತಿಗಳು ತುಳುನಾಡಿನ ಸಂಸ್ಕೃತಿ, ಭಾಷೆ, ಹಾಗೂ ಆರಾಧನಾ ರಂಗಕಲೆಗಳ ಬಗ್ಗೆ ಆಳವಾದ ಅಧ್ಯಯನ ನಡೆಸಿ ಸಂಶೋಧನಾ ಕೃತಿಗಳನ್ನು ನೀಡಿದ್ದಾರೆ.

ತಿರುವಾಂಕೂರಿನ ಆಸ್ಥಾನ ವಿದ್ವಾಂಸರಾಗಿದ್ದ ವೇ.ಮೂ. ಸೀತಾರಾಮ ಉಪಾಧ್ಯಾಯ ಹಾಗೂ ಜಲಜಾಕ್ಷಿಯಮ್ಮ ದಂಪತಿಗಳ ಪುತ್ರನಾಗಿ 10.04.1932 ರಲ್ಲಿ ಡಾ. ಉಪಾಧ್ಯಾಯರು ಜನಿಸಿದರು. ಬಾಲ್ಯದಲ್ಲಿ ತಮ್ಮ ತಂದೆಯವರ ಅಪೇಕ್ಷೆಯಂತೆ ವೈದಿಕ ಶಿಕ್ಷಣವನ್ನು ಪಡೆದವರು. ಸೀತಾರಾಮ ಉಪಾಧ್ಯಾಯರ ಅಣ್ಣ ಉಳಿಯಾರು ಶ್ರೀನಿವಾಸ ಆಚಾರ್ಯರು ಹಿಂದೂ ಧರ್ಮ ಶಾಸ್ತ್ರ, ಜ್ಯೋತಿಷ್ಯ, ಪೌರೋಹಿತ್ಯಾದಿ ಅಧ್ಯಯನ ಮಾಡಿದ ವಿದ್ವಾಂಸರಾಗಿದ್ದರು. ಪಲಿಮಾರು ಮಠದ ನಿಕಟ ಸಂಪರ್ಕದಲ್ಲಿದ್ದು ಅಷ್ಟ ಮಠಗಳ ಯತಿಗಳಿಗೆ ಪಾಠ ಹೇಳುತ್ತಿದ್ದರು. 'ಧರ್ಮ ಶಾಸ್ತ್ರ ವಿಚಕ್ಷಣ' ಎಂಬ ಬಿರುದನ್ನು ಪಡೆದಿದ್ದರು.

ವಿದ್ವತ್ ಪರಂಪರೆಯಲ್ಲಿ ಹುಟ್ಟಿದ ಬಾಲಕನಿಗೆ ವೇ.ಮೂ. ಶ್ಯಾಮಣ್ಣಾಚಾರ್ಯರಿಂದ ವೈದಿಕ ಶಿಕ್ಷಣವನ್ನು ನೀಡಿದರು. ಸಂಸ್ಕೃತ ವ್ಯಾಕರಣ ಮತ್ತು ಸಾಹಿತ್ಯ, ಖಗೋಳಶಾಸ್ತ್ರ, ಪಂಚಾಂಗ, ಶುಭ ಮುಹೂರ್ತಗಳನ್ನು ಗೊತ್ತುಮಾಡುವುದು, ಜಾತಕ ಇತ್ಯಾದಿಗಳನ್ನು ಕರಗತ ಮಾಡಿಕೊಂಡರು.

ಆಗ ಕಲಿತ ಮಂತ್ರಗಳನ್ನು ತಮ್ಮ 80ರ ವಯಸ್ಸಿನಲ್ಲೂ ಹೇಳುತ್ತಿದ್ದುದು ಆಗಿನ ಶಿಕ್ಷಣ ಪದ್ಧತಿಯ ಗಾಂಭೀರ್ಯವನ್ನೂ ಉಪಾಧ್ಯಾಯರಿಗೆ ಇದ್ದ ಆಸಕ್ತಿ ಹಾಗೂ ಪರಿಶ್ರಮವನ್ನೂ ತೋರಿಸುತ್ತದೆ. ಪಾಣಿನಿಯ ಅಷ್ಟಾಧ್ಯಾಯೀ, ಅಮರ ಕೋಶ ಮತ್ತಿತರ ವ್ಯಾಕರಣ ಗ್ರಂಥಗಳನ್ನು ಕಂಠಪಾಠ ಮಾಡಿಕೊಂಡ ಉಪಾಧ್ಯಾಯರು ಸಂಸ್ಕೃತದಲ್ಲಿ ಏನೇ ಸಮಸ್ಯೆಗಳನ್ನು ಕೇಳಿದರೂ ಅಮರಕೋಶದ ಸೂತ್ರಗಳನ್ನು ಉದ್ಧರಿಸಿಯೇ ಪರಿಹಾರವನ್ನು ಸೂಚಿಸುತ್ತಿದ್ದರು. ಪಾರಂಪರಿಕ ವಿಷಯಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿ ಶಿಕ್ಷಣದಲ್ಲಿ ಪರಿಣತಿಯನ್ನು ಪಡೆದರೂ ಮುಂದೆ ಅಣ್ಣನಂತೆ ಸಾಂಪ್ರದಾಯಿಕ ಶಾಲಾ ಶಿಕ್ಷಣ ಪಡೆಯಬೇಕೆಂದು ಅಪೇಕ್ಷಿಸಿದರು. ಅದರಂತೆ ಉಡುಪಿಯ ಅಂದಿನ ಪ್ರಸಿದ್ಧ ಎಂ.ಜಿ.ಎಂ. ಕಾಲೇಜಿನಲ್ಲಿ ಕಾಲೇಜು ಶಿಕ್ಷಣವನ್ನು ಮುಂದುವರಿಸಿದರು. ಕೇರಳ ವಿ.ವಿ. ಯಿಂದ ಸಂಸ್ಕೃತದಲ್ಲಿ ಎಂ.ಎ, ಮದರಾಸು ವಿ.ವಿ. ಯಿಂದ ಕನ್ನಡದಲ್ಲಿ ಎಂ.ಎ, ಮತ್ತು ಪುಣೆಯ ಡೆಕ್ಕನ್ ಕಾಲೇಜಿನ ಭಾಷಾ ಶಾಸ್ತ್ರ ಅಧ್ಯಯನ ಕೇಂದ್ರದಿಂದ ಭಾಷಾಶಾಸ್ತ್ರ ದಲ್ಲಿ ಪ್ರಥಮ ರ್‍ಯಾಂಕಿನೊಂದಿಗೆ ಸ್ನಾತಕೋತ್ತರ ಪದವಿಗಳನ್ನು ಗಳಿಸಿದರು. ಹಿಂದಿಯಲ್ಲಿ ವಿದ್ವಾನ್ ಪದವಿ ಮತ್ತು ಫ್ರೆಂಚ್ ಭಾಷೆಯಲ್ಲಿ ಡಿಪ್ಲೊಮಾ ಪದವಿಯನ್ನೂ ಗಳಿಸಿದ್ದು ಅವರ ಜ್ಞಾನ ತೃಷೆಯನ್ನು ತೋರಿಸುತ್ತದೆ. ಭಾಷಾಶಾಸ್ತ್ರದಲ್ಲಿ ದಕ್ಷಿಣ ಭಾರತದ ಪ್ರಖ್ಯಾತ ಭಾಷಾ ಶಾಸ್ತ್ರಜ್ಞ ಎಚ್. ಎಸ್. ಬಿಳಿಗಿರಿ ಯವರ ಮಾರ್ಗದರ್ಶನದಲ್ಲಿ 'A comparative study of Kannada dialects' ಎಂಬ ವಿಷಯದಲ್ಲಿ ಸಂಶೋಧನೆ ನಡೆಸಿ ಪುಣೆ ವಿ.ವಿ. ಯಿಂದ ಪಿ.ಎಚ್.ಡಿ ಪದವಿ ಪಡೆದರು. ತುಳು ಮಾತೃಭಾಷೆಯ ಇವರು ದಕ್ಷಿಣ ಭಾರತದ ದ್ರಾವಿಡ ಭಾಷೆಗಳಾದ ತಮಿಳು, ಮಲೆಯಾಳಂಗಳ ಬಗ್ಗೆಯೂ ಜ್ಞಾನ ಉಳ್ಳವರಾಗಿದ್ದರು. ಅಲ್ಲದೆ ಫ್ರೆಂಚ್ ಹಾಗೂ ಆಫ್ರಿಕಾದ ವೋಲೋಫ್ ಭಾಷೆಗಳ ಜ್ಞಾನವನ್ನೂ ಪಡೆದವರಾಗಿದ್ದರು.

ತಿರುವನಂತಪುರಂನ ಅನಂತ ಪದ್ಮನಾಭ ದೇವಸ್ಥಾನದ ಅರ್ಚಕರಾದ ಪದ್ಮನಾಭ ಶರ್ಮರ ಏಕ ಮಾತ್ರ ಪುತ್ರಿಯಾಗಿ 1937ರಲ್ಲಿ ಜನಿಸಿದ ಸುಶೀಲ ಉಪಾಧ್ಯಾಯರಿಗೂ ವೈದಿಕ ವಿದ್ವತ್ ಪರಂಪರೆಯ ಹಿನ್ನೆಲೆ ಇತ್ತು. ಶರ್ಮರು ಮಾನಸಿಕ ಅಸ್ವಸ್ಥತೆಗೆ ಒಳಗಾದುದು ಬಾಲಕಿ ಸುಶೀಲಾಳ ಮೇಲೆ ಬಹಳ ಪ್ರಭಾವ ಬೀರಿತ್ತು. ಶ್ರೀಮಂತರಾಗಿದ್ದರೂ ವೈದಿಕ ವೃತ್ತಿಯನ್ನು ಕಳಕೊಂಡು ಆದಾಯವೇ ಇಲ್ಲದೆ ಮುಂದೆ ಕಡು ಬಡವರಾಗಿ ಬಿಟ್ಟರು. ಬಾಲಕಿ ಸುಶೀಲಾ ಕಂಗೆಡದೆ ಟ್ಯೂಶನ್ ಹೇಳಿ, ತಮ್ಮ ಅಧ್ಯಾಪಿಕೆಯರ ಸಹಕಾರದಿಂದ



ವಿದ್ಯಾಭ್ಯಾಸ ಮುಂದುವರಿಸಿದರು. ಹಿಂದಿ ಮತ್ತು ಭಾಷಾಶಾಸ್ತ್ರದಲ್ಲಿ ಎಂ.ಎ ಪದವಿಗಳನ್ನು ಪಡೆದು, ಬ್ಯಾರಿ ಭಾಷೆಯ ಬಗ್ಗೆ ಪ್ರಪ್ರಥಮವಾಗಿ ಅಧ್ಯಯನ ನಡೆಸಿ, ಭಾಷಾಶಾಸ್ತ್ರದಲ್ಲಿ ಪಿ.ಎಚ್.ಡಿ ಪದವಿಯನ್ನು ಪಡೆದರು. ಭಾಷಾ ಶಾಸ್ತ್ರ, ಜಾನಪದ, ಸಂಗೀತ, ಯೋಗ, ಕಸೂತಿ ಇತ್ಯಾದಿಗಳಲ್ಲಿ ಪರಿಣತಿಯನ್ನು ಹೊಂದಿದ್ದರು.

ಶಿಕ್ಷಣ ಮುಗಿದೊಡನೆ ವಿವಿಧ ಕಡೆಗಳಲ್ಲಿ ನೌಕರಿ ಮಾಡಿದ ವಿಶಿಷ್ಟ ಅನುಭವ ಉಪಾಧ್ಯಾಯ ದಂಪತಿಗಳದ್ದು. ಮದರಾಸಿನ ಪ್ರಾಚ್ಯ ಹಸ್ತಪ್ರತಿ ಗ್ರಂಥಾಲಯದಲ್ಲಿ ಉಪ ಗ್ರಂಥಪಾಲರಾಗಿ, ಬೆಂಗಳೂರಿನ ಸಂತ ಜೋಸೆಫರ ಕಾಲೇಜಿನಲ್ಲಿ ಉಪಾನ್ಯಾಸಕರಾಗಿ, ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ದಕ್ಷಿಣ ಪ್ರಾದೇಶಿಕ ಭಾಷಾ ಕೇಂದ್ರದ ಪ್ರಥಮ ಪ್ರಿನ್ಸಿಪಾಲರಾಗಿ, ಆಫ್ರಿಕಾದ ಡಕಾರಿನ ಇಫಾನ್ ವಿ.ವಿ.ಯಲ್ಲಿ ಇಂಡೋ ಆಫ್ರಿಕನ್ ಭಾಷಾ ಮತ್ತು ಜಾನಪದದ ಸಂಶೋಧಕರಾಗಿ, ಫ್ರಾನ್ಸ್, ಆಫ್ರಿಕಾ, ಯು.ಕೆ. ಭಾರತ ದೇಶಗಳ ವಿಸಿಟಿಂಗ್ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಡಾ. ಸುಶೀಲಾ ಉಪಾಧ್ಯಾಯರೂ ಹಿಂದಿ ಪ್ರಚಾರಕಿಯಾಗಿ ಉಡುಪಿಯ ಎಂ.ಜಿ.ಎಂ., ಬೆಂಗಳೂರಿನ ಬಿ.ಎಂ.ಎಸ್. ಮಹಿಳಾ ಕಾಲೇಜ್ ಹಾಗೂ ಸೇಕ್ರೆಡ್ ಹಾರ್ಟ್ ಯುರೋಪಿಯನ್ ಸ್ಕೂಲ್‌ನಲ್ಲಿ ಉಪನ್ಯಾಸಕಿಯಾಗಿ, ಭಾರತೀಯ ಭಾಷಾ ಸಂಸ್ಥೆಯಲ್ಲಿ ಸಂಶೋಧನಾ ಅಧಿಕಾರಿಯಾಗಿ, ಇಫಾನ್ ವಿ.ವಿ.ಯಲ್ಲಿ ಇಂಡೋ ಆಫ್ರಿಕನ್ ಭಾಷಾ ಮತ್ತು ಜಾನಪದದ ಸಂಶೋಧಕರಾಗಿ ಕಾರ್ಯ ನಿರ್ವಹಿಸಿದರು.

ಕೊನೆಗೆ ಭಾರತಕ್ಕೆ ಬಂದು ಪ್ರೊ. ಕು.ಶಿ. ಹರಿದಾಸ ಭಟ್ಟರ ಕೇಳಿಕೆಯಂತೆ ಉಡುಪಿಯ ಮಹಾತ್ಮಾ ಗಾಂಧಿ ಕಾಲೇಜಿನ ರಾಷ್ಟ್ರ ಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದಲ್ಲಿ

ಪ್ರೊಫೆಸರಾಗಿ ಬೃಹತ್ ಗಾತ್ರದ 3400 ಪುಟಗಳ, 6 ಸಂಪುಟಗಳ ತುಳು ನಿಘಂಟು ಯೋಜನೆಯಲ್ಲಿ ಪ್ರಧಾನ ಸಂಪಾದಕರಾಗಿ 19 ವರ್ಷಗಳ ಕಾಲ ತಪಸ್ಸಿನಂತೆ, ಹಗಲಿರುಳೆನ್ನದೆ ನಿರಂತರ ದುಡಿದ ದಂಪತಿಗಳ ಕಾರ್ಯ ನಿಷ್ಠೆ, ಪರಿಶ್ರಮ ಅನನ್ಯವಾದುದು.

ಬಹುಮುಖ ಪ್ರತಿಭೆಯುಳ್ಳ ಡಾ. ಉಪಾಧ್ಯಾಯರು, ಭಾಷಾಶಾಸ್ತ್ರ, ಜಾನಪದ, ತುಳು ಭಾಷೆ ಸಂಸ್ಕೃತಿ, ತುಳುನಾಡಿನ ಭೂತಾರಾಧನೆ, ನಾಗಾರಾಧನೆ, ಮಾತೃದೇವತಾರಾಧನೆ ವಿಷಯಗಳಲ್ಲಿ ಮೌಲಿಕ ಪುಸ್ತಕಗಳನ್ನು ಬರೆದಿದ್ದಾರೆ. 'Comparative study of Kannada dialects', 'Kannada Phonetic reader', 'Dravidian and Negro-African an etho-linguistic study', (ಡಾ. ಸುಶೀಲಾ ಉಪಾಧ್ಯಾಯರೊಂದಿಗೆ), 'Nanjanaguudu Kannada', (ಒಕ್ಕಲಿಗರ ಒಂದು ಉಪಭಾಷೆ), 'Coorg, Kannada', (ಕೊಡಗಿನ ಜೇನು ಕುರುಬರ ಉಪಭಾಷೆ), 'Kuruba, a Dravidian language' (ನೀಲಗಿರಿ ಬೆಟ್ಟದ ಬೆಟ್ಟ ಕುರುಬರ ಉಪಭಾಷೆ), ಮಲಯಾಳಂ ಭಾಷೆ ಮತ್ತು ಸಾಹಿತ್ಯ (ಪತ್ನಿ ಡಾ. ಸುಶೀಲಾ ಉಪಾಧ್ಯಾಯರೊಂದಿಗೆ), 'ಭಾಷೆಗಳ ಆಡುಂಬೊಲ ನಮ್ಮ ಕರಾವಳಿ' (ಡಾ. ಸುಶೀಲಾ ಉಪಾಧ್ಯಾಯರೊಂದಿಗೆ) ಹಾಗೂ ತುಳು ನಿಘಂಟಿನ 6 ಬೃಹತ್ ಸಂಪುಟಗಳು ಮತ್ತು ಅವುಗಳ ಸಾರ ಸಂಗ್ರಹ ರೂಪದ ಸಂಕ್ಷಿಪ್ತ 'ತುಳು ನಿಘಂಟು' ಅವರ ಭಾಷಾಶಾಸ್ತ್ರೀಯ ಕೃತಿಗಳು. 'Conversational Kannada', 'Conversational Tamil', 'Conversational Malayalam', 'Conversational Sanskrit', 'Samvaada Sanskruta', ಇವು ಡಾ. ಎನ್.ಡಿ. ಕೃಷ್ಣಮೂರ್ತಿ ಮತ್ತಿತರರೊಂದಿಗೆ ಬರೆದ ಪುಸ್ತಕಗಳು. ಹಲವು ಪುಸ್ತಕಗಳು ಎಂಟು, ಒಂಭತ್ತು ಮರುಮುದ್ರಣಗಳನ್ನು ಕಂಡಿದೆ. ಇವಲ್ಲದೆ 'Conversational Tulu', ಹಾಗೂ ತುಳುವೇತರರಿಗೆ ತುಳುವನ್ನು ಕಲಿಸುವುದಕ್ಕಾಗಿ 'ತುಳು ಕೈಪಿಡಿ'ಯನ್ನೂ ಸ್ವತಂತ್ರವಾಗಿ ಬರೆದರು. 'Folk epics of Tulunadu', (ಸಂ) 'Coastal Karnataka', 'Bhuta worship: Aspects of Ritualistic theatre' (ಡಾ. ಸುಶೀಲಾ ಉಪಾಧ್ಯಾಯರೊಂದಿಗೆ) 'Folk Rituals' (of the Tulu region of Coastal Karnataka), (ಪತ್ನಿ ಡಾ. ಸುಶೀಲಾ ಉಪಾಧ್ಯಾಯ ರೊಂದಿಗೆ), Coastal Karnataka, (ಸಂ.) 'ದಕ್ಷಿಣ ಭಾರತದ ಜಾನಪದ–ಕೆಲವು ನೋಟಗಳು', 'ಆಫ್ರಿಕಾ ಖಂಡದ ಜನಪದ ಕಥೆಗಳು', 'ತುಳು ನಿಘಂಟಿನ ಗಾದೆಗಳು', 'ಭಾಷಿಕ, ಸಾಂಸ್ಕೃತಿಕ ಚಿಂತನೆಗಳು' ಇವು ಜಾನಪದ ಕೃತಿಗಳು. ಉಡುಪಿಯ ಅಷ್ಟಮಠಗಳ ಮಠಗಳ ಪ್ರಕಟಣೆಯ ಹಾಗೂ ಸಂಪಾದನೆಯ ಕೆಲಸಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ. ಕನ್ನಡ, ತುಳು, ದ್ರಾವಿಡ ಭಾಷೆಗಳ ರಾಷ್ಟ್ರೀಯ ಸಮ್ಮೇಳನಗಳ ಸರ್ವಾಧ್ಯಕ್ಷರಾಗಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಇವರ ತುಳು ನಿಘಂಟು ವಿಶ್ವ ಮಾನ್ಯತೆ ಪಡೆದಿದೆ. ಅಲ್ಲದೆ ಬ್ಯಾರಿ ಭಾಷಾ ಪದಕೋಶ ರಚನೆಯಲ್ಲಿ ಸಲಹೆಗಾರರಾಗಿದ್ದರು.

ಡಾ. ಸುಶೀಲಾ ಉಪಾಧ್ಯಾಯರು ಪತಿಯೊಂದಿಗೆ ಅಲ್ಲದೆ ಸ್ವತಂತ್ರವಾಗಿ ಹಾಗೂ ಇತರರೊಂದಿಗೆಯೂ ಕೃತಿಗಳನ್ನು ರಚಿಸಿದ್ದಾರೆ. 'Hindi-Kammada Common Vacabulary', ಕನ್ನಡೇತರರಿಗಾಗಿ ಕನ್ನಡ ವ್ಯಾಸಂಗ ಶಿಕ್ಷಕ, ಸಂಪುಟ 1,2, ಮತ್ತು 3. 'Kuwi Phonetic reader', (ಬಿ. ರಾಮಕೃಷ್ಣ ರೆಡ್ಡಿ ಮತ್ತು ಜೋಯ್ Dyula ಭಾಷೆಗಳು), 'ಜಾನಪದ ಆರಾಧನೆ ಮತ್ತು ರಂಗಕಲೆ', 'ಶಬ್ದಾತೀತ', 'ಬ್ಯಾರಿ ಭಾಷೆ ಮತ್ತು ಜನಪದ ಕಥೆಗಳು', 'ಹಿಂದೂ ಧರ್ಮ ಮತ್ತು ಮಹಿಳಾವಾದ' ಇವು ಅವರ ಕೃತಿಗಳು. ತುಳು ನಿಘಂಟು ರಚನೆಗಾಗಿ ಕ್ಷೇತ್ರ ಕಾರ್ಯ ಕೈಗೊಂಡಾಗ ಸಂಗ್ರಹಿಸಿದ ಪಾಡ್ದನಗಳ ಸರಮಾಲೆ ಸಂಶೋಧನೆ ಮಾಡುವವರಿಗೆ ಉತ್ತಮ ಆಕರವಾಗಬಹುದು. ಕೇಸೆಟ್ಟಿನಲ್ಲಿದ್ದ ಈ ಪಾಡ್ದನಗಳನ್ನು ಸಿ.ಡಿ. ಯಲ್ಲಿ ಧ್ವನಿಮುದ್ರಿಸಬೇಕೆಂಬ ಅವರ ಆಸೆ ಅವರು ದಿವಂಗತ ರಾದ ಮೇಲಷ್ಟೇ ಸಾಧ್ಯವಾಯಿತು.

ಇವರಿಬ್ಬರು ಜೊತೆಯಾಗಿ ಕೈಗೆತ್ತಿಕೊಂಡ ತಿರುವನಂತಪುರಂನ ದ್ರಾವಿಡ ಭಾಷೆಗಳ ಅಂತಾರಾಷ್ಟ್ರೀಯ ಅಧ್ಯಯನ ಸಂಸ್ಥೆಯ ತುಳು, ಮಲೆಯಾಳಂ, ಕನ್ನಡ, ಇಂಗ್ಲೀಷ್ ಪದಕೋಶ ರಚನೆಯ ಯೋಜನೆ ಇನ್ನೂ ಪೂರ್ಣಗೊಂಡಿಲ್ಲ. ಸಧ್ಯಕ್ಕೆ ಅದನ್ನು ನಾನು ಮುಂದುವರಿಸುತ್ತಿದ್ದೇನೆ.

ಘನ ವಿದ್ವಾಂಸರಾಗಿದ್ದರೂ ತಮ್ಮ ಅರ್ಹತೆಗೆ ತಕ್ಕ ವೇತನವಾಗಲೀ ಸಂಭಾವನೆಯನ್ನಾಗಲೀ ಈ ದಂಪತಿಗಳು ಬಯಸಿದವರಲ್ಲ. ಜೀವನ ನಿರ್ವಹಣೆಗೆ ಒಂದಷ್ಟು ಆರ್ಥಿಕ ಅನುಕೂಲವಾದರೆ ಸಾಕು. ತಾವು ಮಾಡುವ ಕೆಲಸದಲ್ಲಿ ಸಿಗುವ ತೃಪ್ತಿ ಸಮಾಧಾನಗಳೇ ಮುಖ್ಯ ಎಂಬ ಭಾವನೆ ಹೊಂದಿದ್ದವರು ಈ ದಂಪತಿಗಳು. ತಾವು ಗಳಿಸಿದ ಅಲ್ಪ ಸಂಭಾವನೆಯಲ್ಲಿ ಮತ್ತು ತಮ್ಮ ಮಕ್ಕಳು ತಮಗೆ ಖರ್ಚಿಗೆ ನೀಡಿದ ಹಣದಲ್ಲಿಯೂ ಉಳಿತಾಯ ಮಾಡಿ, ತರುಣ ಸಾಧಕರಿಗೆ ಪ್ರೋತ್ಸಾಹ ನೀಡಲು ಕರ್ನಾಟಕದಲ್ಲಿ ನಾಲ್ಕು ಹಾಗೂ ಕೇರಳದಲ್ಲಿ ಒಂದು ಪ್ರಶಸ್ತಿಯನ್ನು ಭಾಷಾಶಾಸ್ತ್ರ, ಸಂಗೀತ, ಸಾಹಿತ್ಯ, ಸಂಶೋಧನಾ ಕ್ಷೇತ್ರಗಳಲ್ಲಿ ಸ್ಥಾಪಿಸಿರುವುದು ಅವರ ಹೆಗ್ಗಳಿಕೆಯೇ ಸರಿ. ತಂದೆ ತಾಯ್ಗಳು ಇಳಿವಯಸ್ಸಿನಲ್ಲಿ ಅನುಕೂಲವಾಗಿದ್ದು ಆರಾಮವಾಗಿ ಇರಬೇಕೆಂದು ಹಣವನ್ನು ಕಳುಹಿಸುವ ಮಕ್ಕಳು, ಆ ಹಣದಲ್ಲೇ ಒಂದಷ್ಟು ಉಳಿಸಿ ಅವರಿಗೇ ಹಿಂದಿರುಗಿಸುವ ಈ ಮಾತಾಪಿತೃಗಳು, ಎಂತಹ ಅದ್ಭುತ ಜೋಡಿ!

ಯಾವಾಗಲೂ ವನಸುಮದಂತೆ ತೆರೆಯ ಮರೆಯಲ್ಲೇ ತಾವಾಯಿತು, ತಮ್ಮ ಕೆಲಸ ವಾಯಿತು ಎಂಬಂತಿದ್ದು, ಪ್ರಶಸ್ತಿ ಸನ್ಮಾನಗಳನ್ನು ಬಯಸದ ಇವರ ಬಳಿಗೆ ತಾನಾಗಿಯೇ ಪ್ರಶಸ್ತಿಗಳು ಬಂದಿವೆ. ಉಪಾಧ್ಯಾಯರ ಸಮಗ್ರ ಸೇವೆ ಮತ್ತು ಸಾಧನೆಗೆ 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 'ಕಿಟ್ಟೆಲ್ ಪ್ರಶಸ್ತಿ', 'ಶಂ.ಭಾ. ಜೋಶಿ ಪ್ರಶಸ್ತಿ', 'ಬನ್ನಂಜೆ ಬಾಬು ಅಮೀನ್ ಪ್ರಶಸ್ತಿ', 'ಸೇಡಿಯಾಪು ಕೃಷ್ಣ ಭಟ್ಟ ಪ್ರಶಸ್ತಿ', 'ಡಾ. ಶಿವರಾಮ ಕಾರಂತ ಪ್ರಶಸ್ತಿ', ಅಖಿಲ ಭಾರತ ಮತ್ತು ವಿಶ್ವ 'ತುಳು ಸಮ್ಮೇಳನಗಳ ಪ್ರಶಸ್ತಿ', 'ತುಳು ಅಕಾಡೆಮಿಯ ಗೌರವ ಪ್ರಶಸ್ತಿ' ಅಲ್ಲದೆ ಸಂಶೋಧನಾ ಕ್ಷೇತ್ರಕ್ಕೆದಲ್ಲ ತುಳು ನಿಘಂಟು ರಚನೆಗೆ 'ಹರ್ಮನ್ ಗುಂಡರ್ಟ್ ಪ್ರಶಸ್ತಿ' ಇತ್ಯಾದಿ ಅನೇಕ ಪ್ರಶಸ್ತಿಗಳು ಸಂದಿವೆ. ಸುಶೀಲಮ್ಮನವರನ್ನೂ ಅನೇಕ ಪ್ರಶಸ್ತಿಗಳು ಅರಸಿಕೊಂಡು ಬಂದಿವೆ. ಅವುಗಳಲ್ಲಿ ಪುತ್ತೂರಿನ 'ಶಿವಳ್ಳಿ ಮಹಿಳಾ ಸಂಪದದ ಗೌರವ ಪ್ರಶಸ್ತಿ', 'ಪೊಳಲಿ ಶೀನಪ್ಪ ಹೆಗ್ಡೆ ಪ್ರಶಸ್ತಿ', 'ವೀರರಾಣಿ ಅಬ್ಬಕ್ಕ ಪ್ರಶಸ್ತಿ', 'ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪ್ರಶಸ್ತಿ' ಇತ್ಯಾದಿ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಇವರ ಜೀವನ ಸಾಧನೆಗಳ ಬಗ್ಗೆ ಕಾಂತಾವರ ಕನ್ನಡ ಸಂಘದಿಂದ ಪ್ರಕಟಿಸಿದ ಎಸ್.



**ಡಾ. ಯು.ಪಿ. ಉಪಾಧ್ಯಾಯ ಮತ್ತು ಡಾ. ಸುಶೀಲಾ ಉಪಾಧ್ಯಾಯ**

ಆರ್. ಅರುಣ್ ಕುಮಾರ್ ಬರೆದ 'ಮಹಾ ಮಹೋಪಾಧ್ಯಾಯ ಡಾ. ಉಳಿಯಾರು ಪದ್ಮನಾಭ ಉಪಾಧ್ಯಾಯ', ಶ್ರೀಮತಿ ಜಾನಕಿ ಬ್ರಹ್ಮಾವರ ಬರೆದ 'ಸಮಾಜಮುಖಿ ಸಂಶೋಧಕಿ ಡಾ. ಸುಶೀಲಾ ಪದ್ಮನಾಭ ಉಪಾಧ್ಯಾಯ', ಎಸ್.ಎನ್.ಡಿ. ಪೂಜಾರಿಯವರು ಪ್ರಕಟಿಸಿದ 'saga of scholar couple' ಮತ್ತು ಉಪಾಧ್ಯಾಯ ದಂಪತಿಗಳ ಅಭಿನಂದನಾ ಗ್ರಂಥ 'ಕೊಪ್ವರಿಗೆ' ಎಂಬ ಪುಸ್ತಕಗಳು ವಿವರವಾಗಿ ತಿಳಿಸುತ್ತವೆ.

ಪ್ರೊ. ಯು.ಪಿ. ಉಪಾಧ್ಯಾಯರು ಎಂದೂ ತಮ್ಮ ವಿದ್ವತ್ ಪ್ರದರ್ಶನ ಹಾಗೂ ಪಾಂಡಿತ್ಯದ ಅಹಂಕಾರವನ್ನು ತೋರ್ಪಡಿಸಿದವರು ಅಲ್ಲ. ಅವರನ್ನು ಭೇಟಿ ಯಾಗಲು ಪೂರ್ವಾನುಮತಿ ಬೇಕಾಗಿರಲಿಲ್ಲ. ಭೇಟಿಗೆ ಬಂದವರನ್ನು ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಇತರರ ಪ್ರತಿಭೆ ಪಾಂಡಿತ್ಯಗಳನ್ನು ಗುರುತಿಸಿ ಬೆಳೆಸಲು ಸಹಕರಿಸುವುದು ಈ ಮಹನೀಯರ ಸ್ವಭಾವವಾಗಿತ್ತು. ಅದಕ್ಕೆ ನಾನೇ ಜೀವಂತ ಸಾಕ್ಷಿ. 1985 ರಲ್ಲಿ ನನ್ನ ಎಂ. ಫಿಲ್ ಮುಗಿಸಿ ಪಿ.ಎಚ್.ಡಿ. ಮಾಡುವುದಕ್ಕಾಗಿ ಮಂಗಳೂರು ವಿ. ವಿ. ಗೆ ಹೋದಾಗ ಪ್ರೊ. ವಿವೇಕ ರೈಯವರು ನನ್ನನ್ನು ಪ್ರೊ. ಉಪಾಧ್ಯಾಯರಲ್ಲಿಗೆ ಕಳಿಸಿದರು. ಹಾಗೆ ಪರಿಚಯವಾದ ಉಪಾಧ್ಯಾಯ ದಂಪತಿಗಳ ಸಂಪರ್ಕ ಅವರ ಜೀವಿತದ ಕೊನೆಯವರೆಗೂ ಇತ್ತು. ಅವರ ಸರಳತೆ, ವಿವಿಧ ಕ್ಷೇತ್ರಗಳ ಜ್ಞಾನದ ಆಗಾಧತೆಗೆ ನಾನು ಶರಣಾದೆ. ನಾನು ಅವರ ಅನುಯಾಯಿಯೇ ಆಗಿಬಿಟ್ಟೆ. ನನ್ನನ್ನು ತಮ್ಮ ಮಗಳ ಸ್ಥಾನದಲ್ಲಿಟ್ಟು ಪ್ರೀತಿಯಿಂದ ಪೋಷಿಸಿದರು. ಬಹುಶಃ ಬಾಲ್ಯದಲ್ಲಿ ಅವರ ಹಾಗೆ ನಾನೂ ಕಷ್ಟ ಪಟ್ಟು ಅನ್ನ ಬಟ್ಟೆಗಾಗಿ ಹಪಹಪಿಸಿ ಶಿಕ್ಷಣವನ್ನು ಪಡೆದುದರಿಂದ ನನ್ನ ಕಷ್ಟ ಅವರಿಗೆ ಮನವರಿಕೆಯಾಗಿರಬೇಕು. ನನ್ನ ಪಿ.ಎಚ್.ಡಿ. ಗೆ ಅಧಿಕೃತವಾಗಿ ಅವರನ್ನು ಮಾರ್ಗದರ್ಶಕರನ್ನಾಗಿ ಪಡೆಯಲು ಆಗಲಿಲ್ಲ. ಆದರೆ ಅವರು ಸದಾ ನನ್ನ ಮಾರ್ಗದರ್ಶಕರಾದರು. ನನ್ನ ಮಾತೃ ಭಾಷೆಯ ಬಗ್ಗೆ ಅಧ್ಯಯನ ಮಾಡಬೇಕೆಂದಿದ್ದ ನನ್ನನ್ನು ಪುಣೆಗೆ ಕಳಿಸಿ ಭಾಷಾ ಶಾಸ್ತ್ರದಲ್ಲಿ ಎಂ.ಎ. ಓದುವಂತೆ ಪ್ರೇರೇಪಿಸಿ, ಕೊನೆಗೂ ನಾನು ಪಿ.ಎಚ್.ಡಿ ಪಡೆದಾಗ ತಾನೇ ಡಿಗ್ರಿ ಪಡೆದಷ್ಟು ಹಿಗ್ಗಿದವರು ಇವರು. ಔದ್ಯೋಗಿಕ ಕ್ಷೇತ್ರದಲ್ಲಿ ಸಹೋದ್ಯೋಗಿಗಳಿಂದ, ಮೇಲಧಿಕಾರಿಗಳಿಂದ ತೊಂದರೆಯಾದಾಗ ಹೇಗೆ ನಿಭಾಯಿಸಬೇಕು ಎಂಬುದನ್ನು ತಿಳಿಸಿಕೊಟ್ಟವರು ಇವರು. ನನ್ನನ್ನು ಎಲ್ಲೆಲ್ಲಿ ಕೆತ್ತಬೇಕೋ ಅಲ್ಲೆಲ್ಲ ಕೆತ್ತಿ ಎಲ್ಲೆಲ್ಲಿ ಮೆತ್ತಬೇಕೋ ಅಲ್ಲೆಲ್ಲ ಮೆತ್ತಿ, ನನ್ನನ್ನು ಹೊಗಳಿ, ಉಬ್ಬಿಸಿ, ಬೈದು, ಭಂಗಿಸಿ ನನ್ನ ಜೀವನಕ್ಕೊಂದು ರೂಪವನ್ನು ಕೊಟ್ಟವರಿವರು. ಹಳ್ಳಿಯಿಂದ ಬಂದ ನಾನು ವೇಷ ಭೂಷಣಗಳಲ್ಲಿ, ಮಾತಿನ ಶೈಲಿಯಲ್ಲಿ ನಗರದ ವಿದ್ಯಾರ್ಥಿಗಳೊಂದಿಗೆ ಬೆರೆಯುವಾಗ ಹಿಂಜರಿಯುತ್ತಿದ್ದೆ. ಆಧುನಿಕ ಉಡುಗೆ ತೊಡುಗೆಗಳಿಲ್ಲದೆ ಮುಜುಗರಪಡುತ್ತಿದ್ದ ನನಗೆ ಈ ದಂಪತಿಗಳ ಸರಳತೆ ನೋಡಿ ಅಭಿಮಾನವೆನಿಸಿತು.

> "ಪ್ರೊ. ಯು.ಪಿ. ಉಪಾಧ್ಯಾಯರು ಎಂದೂ ತಮ್ಮ ವಿದ್ವತ್ ಪ್ರದರ್ಶನ ಹಾಗೂ ಪಾಂಡಿತ್ಯದ ಅಹಂಕಾರವನ್ನು ತೋರ್ಪಡಿಸಿದವರು ಅಲ್ಲ. ಅವರನ್ನು ಭೇಟಿ ಯಾಗಲು ಪೂರ್ವಾನುಮತಿ ಬೇಕಾಗಿರಲಿಲ್ಲ. ಭೇಟಿಗೆ ಬಂದವರನ್ನು ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಇತರರ ಪ್ರತಿಭೆ ಪಾಂಡಿತ್ಯಗಳನ್ನು ಗುರುತಿಸಿ ಬೆಳೆಸಲು ಸಹಕರಿಸುವುದು ಈ ಮಹನೀಯರ ಸ್ವಭಾವವಾಗಿತ್ತು."

ಹಿಂಜರಿಕೆ ಮಾಯವಾಯಿತು. ವಿದ್ಯಾರ್ಥಿ ವಿದ್ಯಾರ್ಥಿಯೇ ಆಗಿರಬೇಕಲ್ಲದೆ ಇತರ ವಿಚಾರಗಳತ್ತ ಆಕರ್ಷಿತರಾಗಬಾರದೆಂಬ ಅವರ ಅಭಿಪ್ರಾಯ ನನಗೆ ನೂರು ಬಲ ಕೊಟ್ಟಿತ್ತು. ಸಮಯ, ಶ್ರಮ, ಮತ್ತು ಧನವನ್ನು ಮಿತವಾಗಿ ಬಳಸುವುದನ್ನು ರೂಢಿಸಿಕೊಂಡಿದ್ದ ನಾನು ಈ ದಂಪತಿಗಳಲ್ಲೂ ಇದೇ ಗುಣವನ್ನು ಕಂಡಾಗ ಹಿಗ್ಗಿ ಹೋಗಿದ್ದೆ. ಈ ಮಿತವ್ಯಯವೂ ಜಿಪುಣತನ ಅಲ್ಲವೆಂದು ಅವರ ಜೀವನ ನೋಡಿ ನಾನು ತಿಳಿದೆ. ಅವಕಾಶ ಸಿಕ್ಕಿದಾಗಲೆಲ್ಲ ಸಿಕ್ಕಿದ ಜ್ಞಾನವನ್ನು ಬಾಚಿಕೊಳ್ಳುವ ಪ್ರವೃತ್ತಿ ಅವರಂತೆ ನನ್ನಲ್ಲೂ ಇದ್ದುದರಿಂದ ಜೊತೆಗೆ ಅವರ ಹಾಗೇ ನಿರಂತರವಾಗಿ ಪರಿಶ್ರಮಪಡುವ ನನ್ನ ಸ್ವಭಾವದಿಂದಾಗಿ ಅವರಿಗೆ ತುಂಬ ಆತ್ಮೀಯಳಾದೆ.

ಅವರು ನೇರವಾಗಿ ನನಗೆ ಕಲಿಸಿಲ್ಲ. ಅವರೊಡನೆ ಇದ್ದು ನಾನು ಅನೇಕ ವಿಷಯಗಳನ್ನು ಕಲಿತೆ. ನನ್ನನ್ನು 'ಏಕಲವ್ಯ' ಎಂದು ಕರೆಯುತ್ತಿದ್ದ ದಂಪತಿಗಳು ಅವರ ಆಸಕ್ತಿಯ ಎಲ್ಲ ಕ್ಷೇತ್ರಗಳಲ್ಲೂ ನನ್ನನ್ನು ತೊಡಗಿಸಿಕೊಂಡಿದ್ದರು. ರೇಕಿ ಮತ್ತು ಸಿದ್ಧ ಸಮಾಧಿ ಯೋಗದ ಪ್ರಥಮ ಮತ್ತು ದ್ವಿತೀಯ ಹಂತದ ತರಗತಿಗಳನ್ನು ಡಾ. ಉಪಾಧ್ಯಾಯ ಗುರುಗಳ ಜೊತೆಯಲ್ಲಿಯೇ ಭಾಗವಹಿಸುವ ಯೋಗ ನನ್ನದಾಗಿತ್ತು. ಅವರು ನನಗೆ ಕೊಟ್ಟ ಸಲಿಗೆಯಿಂದ ಅವರ ಮಕ್ಕಳು ಹತ್ತಿರದಲ್ಲಿಲ್ಲದ ಕೊರತೆಯನ್ನು ನೀಗಿಸಲು ಪ್ರಯತ್ನಿಸುತ್ತಿದ್ದೆ. ಅವರ ಉಡುಪಿಯ ಹಾಗೂ ಉಳಿಯಾರಿನ ಮನೆಯಂಗಳದಲ್ಲಿ ನನ್ನ ಇಷ್ಟದಂತೆ ಹೂವಿನ ಹಾಗೂ ತರಕಾರಿ ಗಿಡಗಳನ್ನು ನೆಟ್ಟು ಬೆಳೆಸಿದಾಗ, ನಮ್ಮ ಊರಿನಿಂದ ಒಂದೆಲಗ, ಗುಡ್ಡೆಯಲ್ಲಿನ ಚಿಗುರು ಕೊಡಿಗಳನ್ನು ಕಿತ್ತು ತಂದು ರುಬ್ಬುವ ಕಲ್ಲಿನಲ್ಲಿ ಚಟ್ನಿ, ತಂಬುಳಿ ಮಾಡಿದಾಗ ಎಷ್ಟೊಂದು ಹಿಗ್ಗುತ್ತಿದ್ದರು. ಬಹಳ ಅಲ್ಪ ತೃಪ್ತರು ನನ್ನ ಈ ಗುರು ದಂಪತಿಗಳು.

ಪ್ರೊ. ಸುಶೀಲಾ ಉಪಾಧ್ಯಾಯರ ಹೆಸರಿನಲ್ಲಿ ಪ್ರಾರಂಭಿಸಿದ ಪ್ರಶಸ್ತಿಗೆ ಮೊತ್ತಮೊದಲಾಗಿ ಸಮಿತಿಯವರು ನನನ್ನು ಆರಿಸಿದಾಗ ಬಹಳ ಆನಂದಪಟ್ಟು ನನನ್ನು ಹರಸಿದ್ದರು ಡಾ. ಉಪಾಧ್ಯಾಯರು . ನಾನು ಅದನ್ನು ಗುರುದೇವರ ಪ್ರಸಾದ ಎಂಬಂತೆ ಧನ್ಯತಾ ಭಾವದಿಂದ ಸ್ವೀಕರಿಸಿ ಕೃತಾರ್ಥಳಾಗಿದ್ದೆ.

ಉಡುಪಿಯ ಆಸುಪಾಸಿನಲ್ಲಿ ಯಾವುದೇ ಬಗೆಯ ಕಾರ್ಯಕ್ರಮವಿರಲಿ, ಇವರಿಬ್ಬರೂ ಜಕ್ಕವಕ್ಕಿಗಳಂತೆ ಅಲ್ಲಿ ಹಾಜರಿರುತ್ತಿದ್ದರು. ಅವರು ಎಂದೂ ಪ್ರತ್ಯೇಕವಾಗಿ ಕಾಣಿಸಿಕೊಂಡದ್ದೇ ಇಲ್ಲ. ಅವರನ್ನು ಸ್ಥಳೀಯರು 'ಕೇಂಜವ ಪಕ್ಕಿ'ಗಳೆಂದೇ ಕರೆಯುತ್ತಿದ್ದರು. ಅವರು ಹೋದಲ್ಲೆಲ್ಲ ನನ್ನನ್ನೂ ಕರೆದುಕೊಂಡು ಹೋಗುತ್ತಿದ್ದರು.

ಆ ಇಳಿವಯಸ್ಸಿನಲ್ಲೂ ಜ್ಞಾನದಾಹ, ನೈಜ ಜಿಜ್ಞಾಸುವಿನ ಪ್ರವೃತ್ತಿ ಉಪಾಧ್ಯಾಯ ದಂಪತಿಗಳನ್ನು ಬಿಟ್ಟರೆ ಬೇರೆಡೆ ಕಾಣುವುದು ಕಷ್ಟ ಸಾಧ್ಯ. ಅವರಿಂದಲೇ ನನಗೆ ನಿವೃತ್ತಿ ಹೊಂದಿದ ಮೇಲೂ ಗಮಕ ಅಧ್ಯಯನ ಮಾಡಲು ಸ್ಫೂರ್ತಿ ದೊರೆಯಿತು. ಸುಶೀಲಮ್ಮ ನಂತೂ ತನಗೆ 'ಗಮಕ ಕಲಿಸಿಕೊಡು' ಎಂದು ದುಂಬಾಲು ಬಿದ್ದಿದ್ದರು. ಅದಕ್ಕೆ ವ್ಯವಸ್ಥೆ ಮಾಡುವುದರೊಳಗೆ ಕಾಲನ ಕರೆಗೆ ಓ ಗೊಟ್ಟು ಅವರು ವಿಷ್ಣು ಸಾಯುಜ್ಯವನ್ನು ಪಡೆದರು. ನನ್ನ ನಿವೃತ್ತಿಯ ನಂತರ ತಮ್ಮ ವಿವಿಧ ಸಂಶೋಧನಾ ಯೋಜನೆಗಳಲ್ಲಿ ನನ್ನನ್ನು ತೊಡಗಿಸಿಕೊಳ್ಳಬೇಕೆಂಬ ಅವರ ಆಸೆ ಪೂರ್ಣವಾಗಲಿಲ್ಲ ಎಂಬುದು ವಿಷಾದನೀಯ. ಆದರೂ ಅವರ ವಹಿಸಿಕೊಂಡಿದ್ದ ಬಹುಭಾಷಾ ನಿಘಂಟಿನ ಕೆಲಸವನ್ನು ಅವರಂತೆಯೇ ಶ್ರಮ ಪಟ್ಟು ಮಾಡ್ತಾ ಇದ್ದೇನೆ ಎಂಬುದು ನನಗೆ ಸಮಾಧಾನದ ವಿಷಯ. ನನಗೆ ವಹಿಸಿದ ಕೆಲಸವನ್ನು ಅವರು ಸ್ವರ್ಗಸ್ಥರಾಗುವ ಕೆಲವೇ ದಿನಗಳ ಹಿಂದೆ ಮುಗಿಸಿದ್ದೆನಾದ್ರೂ ಕೋರೋನಾ ಭೀತಿಯಿಂದಾಗಿ ಅವರನ್ನು ಕೊನೆಯ ದಿನಗಳಲ್ಲಿ ಕಾಣಲಾಗಲಿಲ್ಲವೆಂಬುದು ನನಗೆ ದುಃಖ ಕೊಡುವ ವಿಚಾರ. ತಿರುವನಂತಪುರಂನ ಅಂತಾರಾಷ್ಟ್ರೀಯ ಸಂಸ್ಥೆಗೆ ತನ್ನ ಕೆಲವು ಪುಸ್ತಕಗಳನ್ನು ದಾನವಾಗಿತ್ತಿದ್ದರು. ಅವುಗಳನ್ನು ಸ್ವೀಕರಿಸಿದ ಬಗ್ಗೆ ಅಧಿಕೃತ ಪತ್ರವೂ, ಅವರಿಗೆ ಸಲ್ಲಬೇಕಾದ ಗೌರವ ಧನವೂ ಅವರ ಕೈ ಸೇರುವದರೊಳಗೆ ಅವರು ತಮ್ಮ ಇಹಲೋಕವನ್ನು ತ್ಯಜಿಸಿದ್ದು ನಮಗೆಲ್ಲ ಬಹಳ ಬೇಸರದ ವಿಷಯ.

ಅಪೂರ್ವ ವ್ಯಕ್ತಿತ್ವದ, ಸರಳ ಸಜ್ಜನ ಉಪಾಧ್ಯಾಯ ದಂಪತಿಯನ್ನು ಕಳೆದುಕೊಂಡ ನಾಡು ನಿಜಕ್ಕೂ ನಷ್ಟವನ್ನು ಅನುಭವಿಸುತ್ತಿದೆ ಎಂಬುದು ವಿಷಾದನೀಯ. ಭಗವಂತನು ಅವರಿಗೆ ಸಾಯುಜ್ಯವನ್ನು ಕರುಣಿಸಲಿ. ಅವರ ಸಾಧನೆಗಳೆಲ್ಲವೂ ನಮಗೆ ಸ್ಫೂರ್ತಿ ಹಾಗೂ ಮಾರ್ಗದರ್ಶನ ನೀಡಲಿ.

**ಡಾ. ವಾರಿಜಾ, ನಿರ್ಬೈಲು**
ಹಿರಿಯ ಸಂಶೋಧಕಿ,
ದ್ರಾವಿಡ ಭಾಷೆಗಳ ಅಂತಾರಾಷ್ಟ್ರೀಯ ಸಂಸ್ಥೆ,
ತಿರುವನಂತಪುರಂ


# ನಗುಮುಖದ ಹೃದಯವಂತ ಸಚಿವ ಸುರೇಶ್ ಅಂಗಡಿ

ಜನಾನುರಾಗಿಯಾಗಿದ್ದ ಸುರೇಶ್ ಅಂಗಡಿಯವರು 2004, 2009, 2014 ಹಾಗು 2019 ರಿಂದ ಬೆಳಗಾವಿ ಕ್ಷೇತ್ರದಿಂದ ಸ್ಪರ್ಧಿಸಿ ಸತತ ನಾಲ್ಕು ಬಾರಿ ಲೋಕಸಭಾ ಸದಸ್ಯರಾಗಿ, ಹೌಸ್‌ಕಮಿಟಿಯ ಅಧ್ಯಕ್ಷರಾಗಿ ಹಾಗು ಇತರ ಸ್ಟಾಂಡಿಂಗ್ ಕಮಿಟಿಗಳ ಸದಸ್ಯರಾಗಿದ್ದರು. ಮೇ 2019ರಂದು ಕೇಂದ್ರ ರಾಜ್ಯ ರೈಲ್ವೇ ಸಚಿವರಾಗಿ ಅಧಿಕಾರ ಸ್ವೀಕರಿಸಿದ್ದರು. ಭಾರತೀಯ ಜನತಾ ಪಕ್ಷದ ನಾಯಕನಾಗಿ ಸೇವೆ ಸಲ್ಲಿಸುತ್ತಿದ್ದರು.

ಮಹಾ ಮಾರಕ ಕೊರೊನಾ ಸೋಂಕಿನಿಂದ ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ರೈಲ್ವೇ ಸಚಿವರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಇವರು ಸರಳ ಸಜ್ಜನಿಕೆಯ ವ್ಯಕ್ತಿತ್ವವನ್ನು ಉಳಿಸಿಕೊಂಡಿದ್ದರು. ಅವರು ನಗುಮುಖದ ಹೃದಯವಂತ.

ಸತತ ಪ್ರಯತ್ನಶೀಲರಾದ ಇವರು ಕೊರೊನಾ ಲಾಕ್‌ಡೌನ್‌ನಿಂದ ಕತಾರ್‌ನಲ್ಲಿ ಸಿಲುಕಿಕೊಂಡಿದ್ದ 3000 ಕನ್ನಡಿಗರನ್ನು ಶೀಘ್ರ ತಾಯ್ನಾಡಿಗೆ ಕರೆಸಿಕೊಳ್ಳುವ ಭರವಸೆಯನ್ನು ಕೇಂದ್ರ ರೈಲ್ವೇ ರಾಜ್ಯ ಸಚಿವ ಸುರೇಶ್ ಅಂಗಡಿ ಪೂರ್ಣಗೊಳಿಸಿದರು.

ಅಲ್ಲದೆ 2019ರಲ್ಲಿ ಬೆಳಗಾವಿ–ಬೆಂಗಳೂರು ವಿಶೇಷ ರೈಲಿಗೆ ಚಾಲನೆ ನೀಡಿದರು. ಅಂಥ ಸಚಿವರನ್ನು ಕಳೆದುಕೊಂಡ ನಮ್ಮ ನಾಡಿಗೆ, ದೇಶಕ್ಕೆ ಅಪಾರ ನಷ್ಟವಾಗಿದೆ.



24 ವರುಷದಿಂದ ನನಗೆ ಚಿರಪರಿಚಿತರು. ಅವರ ಶುಭ ಸಂದರ್ಭದಲ್ಲಿ ಹಲವಾರು ಸಲ ಭೇಟಿ ಮಾಡುವ ಅವಕಾಶ ನನ್ನದಾಗಿತ್ತು. ಬೆಳಗಾವಿ ಕ್ಷೇತ್ರದ ಕೇಂದ್ರ ಸಚಿವರಾದ ಶ್ರೀ ಬಾಬಾ ಗೌಡರ ಸಹಾಯಕ ಕಾರ್ಯದರ್ಶಿಯಾಗಿ ಕೆಲಸ ಮಾಡುವ ಸಂದರ್ಭದಲ್ಲಿ ಸಹ ಭೇಟಿಯಾಗುವ ಸೌಭಾಗ್ಯ ನನಗೆ ದೊರಕಿತು.

ನಮ್ಮ ಕನ್ನಡಿಗರ ಮೇಲೆ ಅಪಾರ ಪ್ರೀತಿ ಇದ್ದ ಇವರು ಇಂದು ಇಲ್ಲ ಆದರೂ ಅವರ ಆಚಾರ, ವಿಚಾರ, ಭಕ್ತಿ, ಪ್ರೇಮ ವಿಶ್ವಾಸ ನಾವು ಎಂದೂ ಮರೆಯಲಾರೆವು. ದೇವರು ಅವರ ಆತ್ಮಕ್ಕೆ ಶಾಂತಿ ನೀಡಲಿ, ಅವರ ಕುಟುಂಬದವರಿಗೆ ದುಃಖವನ್ನು ಸಹಿಸುವ ಶಕ್ತಿಯನ್ನು ನೀಡಲೆಂದು ಪ್ರಾರ್ಥನೆ ಸಲ್ಲಿಸುತ್ತೇನೆ.

***ವಿ.ವಿ. ಬಿರಾದಾರ***



**ಕೇಂದ್ರ ರೈಲ್ವೇ ರಾಜ್ಯ ಸಚಿವರಾಗಿದ್ದ ಸುರೇಶ್ ಅಂಗಡಿ ಅವರು ರೈಲ್ವೇ ಯೋಜನೆಯೊಂದರ ಪ್ರಗತಿಯ ಪರಿಶೀಲನೆ ನಡೆಸುತ್ತಿರುವುದು**

**ನುಡಿ ನಮನ**

# ಅಮರ ಗಾಯಕ ಎಸ್.ಪಿ. ಬಾಲಸುಬ್ರಹ್ಮಣ್ಯಂ

ಎಂಬತ್ತರ ದಶಕದ ಕೊನೆಯ ವರ್ಷಗಳು ನಾವಿನ್ನೂ ತೀರಾ ಚಿಕ್ಕವರು. ಈಗಿನಂತೆ ಎಲ್ಲರ ಮನೆಯ ಹಾಲ್‌ನಲ್ಲೊ ಅಥವಾ ಜಗುಲಿಯಲ್ಲೋ ಟಿವಿ ಅನ್ನೋ ಮಾಯಾಪೆಟ್ಟಿಗೆಗೆ ಇನ್ನೂ ಜಾಗ ಖಾಯಂ ಆಗಿರಲಿಲ್ಲ ಮತ್ತು ಅತಿರಂಜಕ ರಿಯಾಲಿಟಿ ಶೋಗಳ ಅಥವಾ 'ಅ' ಸುದ್ದಿ ಚಾನೆಲ್‌ಗಳ ಹಾವಳಿಯೂ ಇರಲಿಲ್ಲ. ಆಗೆಲ್ಲಾ ರೇಡಿಯೋಗಳದ್ದೇ ಕಾರುಬಾರು. ಅದರಲ್ಲೂ ಹಳ್ಳಿಗಳಲ್ಲಿ ರೇಡಿಯೋ ಪ್ರಮುಖ ಮನರಂಜನೆ ಮತ್ತು ಬಾಹ್ಯ ಮಾಹಿತಿ ನೀಡೋ ಏನೋ ಒಂದು ಅದ್ಭುತ ಪೆಟ್ಟಿಗೆ, ಅವಾಗೆಲ್ಲಾ ಟಿವಿ ಇರೋರ ಮನೆ ಅದು ಶ್ರೀಮಂತರ ಮನೆ ಅನ್ನೋ ಅಲಿಖಿತ ನಿಯಮ ನಮ್ಮಲ್ಲಿತ್ತು.ಆಸ್ತಿ ಕಟ್ಕೊಂಡು ಏನಾಗಬೇಕು ಟಿವಿ ಇದೆಯಲ್ಲ ಸಾಕು ಅನ್ನೋ ಒಳನಿರ್ಧಾರ ಮನ ಹೊಕ್ಕಿತ್ತು. ಟಿವಿಯ ಠೀವಿ ಇಲ್ಲದ ನಮ್ಮಂತಹ ಕೆಳ ಮಧ್ಯಮವರ್ಗದಲ್ಲಿ ರೇಡಿಯೋನೇ ಸಕಲವೂ ಆಗಿತ್ತು. ಬೆಳಗ್ಗೆ ಪ್ರದೇಶ ಸಮಾಚಾರವಂತೆ ಮತ್ತೆ 7.35ಕ್ಕೆ ವಾರ್ತೆಗಳು ಆಮೇಲೆ ಚಿತ್ರಗೀತೆಗಳಂತೆ ಹೀಗೆ ಶುರುವಾಗೋ ದಿನಚರಿ. ಚಿತ್ರಗೀತೆಗಳು ಅಂತ ಹೇಳಿದಾಗಲೆಲ್ಲಾ ಗಾಯಕರು ಎಸ್.ಪಿ. ಬಾಲಸುಬ್ರಹ್ಮಣ್ಯಂ ಅಂತ ಹೇಳಿ ಮತ್ತೆ ಜೊತೆಗೆ ಒಮ್ಮೆ ಎಸ್. ಜಾನಕಿ, ಇನ್ನೊಮ್ಮೆ ಪಿ. ಸುಶೀಲಾ, ಮಗದೊಮ್ಮೆ ವಾಣಿಜಯರಾಮ್ ಅಥವಾ ಮಂಜುಳಾ ಗುರುರಾಜ್ ಅಥವಾ ಎಲ್. ಆರ್ ಈಶ್ವರಿ ಅಂತಲೋ ಹೇಳುತ್ತಿದ್ದರು. ಅವಾಗ ನಮಗೆ ಅನ್ನಿಸೋದು ಎಷ್ಟೊಂದು ಅದ್ಭುತವಾಗಿ ಇವರೆಲ್ಲರೂ ಹಾಡ್ತಿದ್ದಾರೆ ಅಂದ್ರೆ ಇವರೆಲ್ಲಾ ನಮ್ಮಂತೆ ಮನುಷ್ಯರೇ ಅಲ್ಲ ಕಿನ್ನರರಂತೆ ಯಾವುದೋ ಬೇರೆ ಲೋಕದಿಂದ ಬಂದು ಸ್ವಲ್ಪ ಹೊತ್ತು ಹಾಡಿ ಹೋಗ್ತಾರೆನೋ ಅಂತ!!. ದಿನಾಲೂ ಹೀಗೆ ಮೂರ್ನಾಲ್ಕು ಬಾರಿ ಚಿತ್ರಗೀತೆಗಳು, ಶ್ರೋತೃಗಳ ಕೋರಿಕೆ ಅಂಥ ಬರ್ತಿದ್ವು. ಕಾರ್ಯಕ್ರಮ ಶುರುವಾಗೋದೇ 'ಯುಗ ಯುಗಗಳೇ ಸಾಗಲಿ ನಮ್ಮ ಪ್ರೀತಿ ಶಾಶ್ವತ' 'ಮಾಮರವೆಲ್ಲೋ ಕೋಗಿಲೆ ಎಲ್ಲೋ' ಅನ್ನೋ ಅದೆಷ್ಟೇ ಕೊಂಕು ಹುಡುಕಿದರೂ ಸಿಗದ ಇಂಪಾದ ಗಂಡಸಿನ ಧ್ವನಿ. ಬಹುತೇಕ ಬಾರಿ ಎಸ್.ಪಿ. ಬಿ ಅವರದ್ದೇ ಇರುತ್ತಿತ್ತು. ಕೆಲವೊಮ್ಮೆ ಪಿ.ಬಿ. ಶ್ರೀನಿವಾಸ್ ಹಾಗೂ ಡಾ. ರಾಜಕುಮಾರ್ ಅವರ ಧ್ವನಿಯಲ್ಲೂ ಸಹ ಹಾಡುಗಳು ಇರ್ತಿದ್ವು. ಹೀಗೆ ನಾವೆಲ್ಲಾ ಸಣ್ಣವರಿದ್ದಾಗಲೇ ದಿನಕ್ಕೆ ಹತ್ತಾರು ಬಾರಿ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅನ್ನೋ ಹೆಸರು ಕೇಳಿ ಕೇಳಿ ಜೀವನ ಪರ್ಯಂತ ಅಳಿಸೋಕೆ ಆಗದಷ್ಟು ಮನಸ್ಸೊಳಗೆ ಆ ದೇವಲೋಕದ ವ್ಯಕ್ತಿಯ ಹೆಸರು ಕೂತಾಗಿತ್ತು!!

ಇಷ್ಟೆಲ್ಲಾ ಆದರೂ ಟಿವಿಯಲ್ಲೊ ಅಥವಾ ಅಪರೂಪಕ್ಕೆ ಥಿಯೇಟರ್‌ನಲ್ಲಿ ಸಿನೆಮಾ ನೋಡೋವಾಗ ನಾಯಕನಟರೇ ಸ್ವತಃ ಹಾಡುತ್ತಾರೆ ಅಂತಲೇ ನಂಬಿಕೆ ಇತ್ತು. ಅಷ್ಟೆಲ್ಲಾ ಹಾರಿ ಹಾರಿ ಹೊಡೆದಾಡೋ ಶಂಕರ್‌ನಾಗ್,



ಅಂಬರೀಶ್, ವಿಷ್ಣುವರ್ಧನ್ ತರದ ಮೆಚ್ಚಿನ ನಟರಿಗೆ ಇಂಪಾಗಿ ಹಾಡೋದೆಲ್ಲ ಯಾವ ಕಷ್ಟ ಅನ್ನೋ ವಿತಂಡ ವಾದವೂ ನಮ್ಮದೇ. ಹೀಗೆ ರೇಡಿಯೋ ಜಮಾನ ಉತ್ತುಂಗದಲ್ಲಿದ್ದಾಗಲೇ ನಿಧಾನಕ್ಕೆ ಅಲ್ಲೊಂದು ಇಲ್ಲೊಂದು ಟಿವಿ ಅನ್ನೋ ಮಾಯಾಪೆಟ್ಟಿಗೆ ಕೆಲವರ ಮನೆ ಮನೆಯ ಹಾಲ್‌ಗೆ ಎಂಟ್ರಿ ಕೊಡೋಕೆ ಶುರು ಆಯ್ತು. ಇನ್ನೂ ಚೆನ್ನಾಗಿ ನೆನಪಿದೆ. ಒಮ್ಮೆ ದೂರದರ್ಶನದಲ್ಲಿ ಚಿತ್ರಮಂಜರಿ ಬರ್ತಿತ್ತು. "ಇದೇ ಭಾಷೆ ಇದೇ ನಾಡು ಎಂದೆಂದೂ ನಮ್ಮದಾಗಿರಲಿ" ಅನ್ನೋ ಹಾಡು ಪ್ರಸಾರ ಆಗ್ತಿತ್ತು ಆಗ ಎಲ್ಲಾ ವಠಾರದಲ್ಲಿ ಅಥವಾ ಹಳ್ಳಿಯಲ್ಲಿ ಒಬ್ಬೊಬ್ಬರು ಸ್ವಲ್ಪ ತಿಳಿದವರೋ ಅಥವಾ ತಿಳಿದವರ ಹಾಗೆ ಆಡೋರು ಒಬ್ಬರಾದ್ರು ಇದ್ದೇ ಇರ್ತಾರೆ!!!.

ಅಂಥವರಲ್ಲಿ ಒಬ್ಬರು ನಮಗೆ ಹೇಳಿದ್ರು. ಈ ಹಾಡನ್ನು ವೇದಿಕೆ ಮೇಲೆ ಹಾಡ್ತಿರೋರೆ ಎಸ್.ಪಿ. ಬಾಲಸುಬ್ರಹ್ಮಣ್ಯಂ ಇವರೇ ನಮ್ಮ ಕನ್ನಡದ ಎಲ್ಲಾ ಹೀರೊಗಳಿಗೆ ಹಾಡೋದು, ಇವರದೇ ಆ ಧ್ವನಿ ಅಂತ ಅವಾಗ ಎಸ್.ಪಿ. ಬಿ. ಅವರನ್ನ ನೋಡಿ ಯಾಕೋ ಮನಸ್ಸಲ್ಲೇ ಒಂದು ಸಣ್ಣ ಅಸೂಯೆ ಬಂತು. ನೋಡೋಕೆ ಒಳ್ಳೆ ಗುಂಡ ಗುಂಡಗೆ ಇರೋ ಇವ್ರು, ನಮ್ ಫೇವರಿಟ್ ಹೀರೋಗಳಿಗೆಲ್ಲಾ ಹಾಡ್ತಾರಾ ಅಂತ?! ಅಷ್ಟೆಲ್ಲ ಹೊಡೆದಾಡೋ ಹೀರೋಗಳಿಗೆ ಇವರಷ್ಟು ಇಂಪಾಗಿ ಹಾಡೋಕೆ ಬರಲ್ವಾ ಅಂಥ ಏನೇನೋ ಯೋಚನೆ ಬಂದ್ವು. ಯಾಕಂದ್ರೆ ಹೀಗೊಂದು ಹಿನ್ನೆಲೆ ಸಂಗೀತ ಅಂತ ಇರುತ್ತೆ ಅದಕ್ಕೆ ಅದರದ್ದೇ ಗಾಯಕರು ಇರ್ತಾರೆ ನಟ ನಟಿಯರು ಬರೀ ತುಟಿ ಅಲುಗಾಡಿಸುತ್ತಾರೆ ಅನ್ನೋ ಕಲ್ಪನೆನೇ ನಮಗಿರಲಿಲ್ಲ!!!. ಅಷ್ಟಕ್ಕೂ ತಪ್ಪು ನಮ್ಮದಲ್ಲ ಗೀತಾ ಚಿತ್ರದ 'ಸಂತೋಷಕ್ಕೆ ಹಾಡು ಸಂತೋಷಕ್ಕೆ' ಹಾಡನ್ನ ಸೇಮ್ ಶಂಕರ್ ನಾಗ್ ಥರ, 'ತೆರಾ ಏರಿ ಅಂಬಾರದಾಗೆ' ಹಾಡನ್ನು ಲೋಕೇಶ್ ಥರ, ಬಂಧನ ದಲ್ಲಿ ವಿಷ್ಣುವರ್ಧನ್ ರೀತಿಯಲ್ಲೇ ಹಾಡಿಗೆ ಭಾವನೆಗಳೇ ಮೈವೆತ್ತಂತೆ ಹಾಡಿದ್ರೆ ನಾವೇನು ಮಾಡೋದು ಹೇಳಿ?? ಕ್ರಮೇಣ ವಾಸ್ತವದ ಅರಿವಾಗತೊಡಗಿತು. ಡಾ. ರಾಜ್ ಮಾತ್ರ ಅವರಿಗೆ ಅವರೇ ಹಾಡ್ತಾರೆ ಉಳಿದೆಲ್ಲಾ ನಟರದ್ದು ಶರೀರ ಮಾತ್ರ ಎಸ್.ಪಿ. ಬಿ ಅವರದ್ದೇ ಶಾರೀರ ಎಂದು.

ನಾಗರಹಾವಿನ ರಾಮಚಾರಿಯ ಕಿಚ್ಚು ಪ್ರತಿಫಲಿಸಿದ ಧ್ವನಿ, ಪ್ರಣಯರಾಜ ಶ್ರೀನಾಥ್‌ರ ಪ್ರೇಮಗೀತೆಗಳು, ಅನಂತ್‌ನಾಗ್‌ರ ದುರಂತ ಅಂತ್ಯದ ಚಿತ್ರಗಳ ಕಾಡುವ ಅದೆಷ್ಟೋ ಗೀತೆಗಳು, ವ್ಯವಸ್ಥೆ ವಿರುದ್ಧ ಸಿಡಿದೇಳೊ ಅಂಬರೀಷ್‌ರ ಸಿಟ್ಟಿನ ಗೀತೆಗಳು, ನಾಯಕಿಯರನ್ನು ಓಡಾಡಿಸಿ ಕಿಚಾಯಿಸುವ ನಗುಮುಖದ ಶಂಕರ್‌ನಾಗ್ ಗೀತೆಗಳು, ಹೊಸತನದ ಹುಟ್ಟುಗಾರ ರವಿಚಂದ್ರನ್ ಮತ್ತು ಕನ್ನಡದಲ್ಲಿ ಡ್ಯಾನ್ಸ್ ಅನ್ನು ಇನ್ನೊಂದು ಹಂತಕ್ಕೆ ಮೇಲೇರಿಸಿದ ಶಿವರಾಜಕುಮಾರ್ ಹಾಡುಗಳು, ನಾಯಕರಾಗೋಕೆ ತೀರಾ ಅಷ್ಟೊಂದು ಸ್ಪುರದ್ರೂಪಿ ಗಳಲ್ಲದ ದಿ. ಕಾಶೀನಾಥ್ ದಿ. ರಘುವೀರ್, ಕೆ. ಶಿವರಾಮ್ ರಂತಹ ನಟರ ಹಾಡುಗಳಿಗೂ ಜೀವಕಳೆ ತುಂಬಿದ್ದೇ ನಿಮ್ಮ ಅದ್ಭುತ ಕಂಠ ಸರ್. ಬರೋಬ್ಬರಿ ನಾಲ್ಕೈದು ದಶಕಗಳಿಂದ ದಕ್ಷಿಣ ಭಾರತದ ಪ್ರತೀ ಮನ–ಮನೆಯಲ್ಲಿ ನೆಲೆ ನಿಂತ ಸ್ವರದ ಮಾಂತ್ರಿಕ ಎಂದರೆ ಎಸ್.ಪಿ. ಬಿ ಮಾತ್ರವೇ. ದ್ರಾವಿಡ ಭಾಷೆಗಳ ಸಿನೆಮಾ ಸಂಗೀತ ಸ್ತರವನ್ನು ಹಲವು ಬಾರಿ ಮೇಲ್ದರ್ಜೆಗೆ ಏರಿಸಿದ್ದೂ ನೀವೇ ಸರ್. ಅದೆಷ್ಟೋ ಗಾಯಕರು ಹಲವು ಜನ್ಮವೆತ್ತಿ ಹಾಡಬಹುದಾದ 41,230 ಗೀತೆಗಳನ್ನು ಒಂದೇ ಜನ್ಮದಲ್ಲಿ ಹಾಡಿ ಮುಗಿಸಿದ್ರಿ ಆದರೂ ನಿಮ್ಮಲ್ಲಿ ಅದೇ ವಿನಯವಂತಿಕೆ, ಬತ್ತದ ಉತ್ಸಾಹ, ಮುಕ್ಕಾಗದ ಮಾಧುರ್ಯ, ಶ್ರುತಿ ತಪ್ಪಾದ ಶಾರೀರ, ವಿನೀತ ಭಾವ... ಎಲ್ಲದಕ್ಕೂ ಮೀರಿದ ಸರಳತೆ, ಸಂಸ್ಕಾರ, ವಿಧೇಯತೆಯೇ ಸ್ವರಲೋಕದ ದೇವತೆಯನ್ನಾಗಿ ನಿಮ್ಮನ್ನು ಕೊನೆಯವರೆಗೂ ಉಳಿಸಿದ್ದು.

ಶಾಸ್ತ್ರೀಯವಾಗಿ ಸಂಗೀತ ಕಲಿಯದಿದ್ದರೂ

**"ಒಂದು ವೇಳೆ ಯಾವುದೋ ಒಂದು ಸಂಗೀತ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಯುವಕ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರನ್ನು ಅಂದು ಘಂಟಸಾಲರವರು ಆಯ್ಕೆ ಮಾಡದಿದ್ದರೆ ದೇಶ ಓರ್ವ ಸ್ವರ ಮಾಂತ್ರಿಕನನ್ನೇ ಕಳೆದುಕೊಳ್ಳುತ್ತಿತ್ತು ಅಂತ ಅನಿಸುತ್ತೆ."**

ಅದೆಷ್ಟು ರಾಗಗಳು, ಸ್ವರಗಳು, ನಟರಿಗೆ ತಕ್ಕಂತೆ ಧ್ವನಿಯ ಏರಿಳಿತಗಳನ್ನು ಹಾಡಿದ್ದೀರೋ ನಿಮ್ಮನ್ನು ಬಿಟ್ಟರೇ ದೇವರಿಗೇ ಗೊತ್ತು. "ತರೀಕೆರೆ ಏರಿಮೆಲೆ ಮೂರು ಕರಿ ಕುರಿ ಮರಿ" ಅನ್ನೋ ಒಂದೇ ಹಾಡನ್ನ ಕರ್ನಾಟಕ, ಹಿಂದೂಸ್ತಾನಿ ಮತ್ತು ಪಾಶ್ಚಾತ್ಯ ಶೈಲಿಯಲ್ಲಿ ಹಾಡಿದ ಹಿಂದೂಸ್ತಾನದ ಏಕೈಕ ಗಾಯಕ ಅಂದ್ರೆ ನೀವು ಮಾತ್ರವೇ. ನಮ್ಮ ಮೆಮೊರಿ ಲಾಸ್ ಆದ್ರೂ ಮರೆಯೋಕೆ ಆಗದ 'ಗೀತಾ, ಬಂಧನ, ಪ್ರೇಮಲೋಕ, ಸೋಲಿಲ್ಲದ ಸರದಾರ, ನಮ್ಮೂರ ಮಂದಾರ ಹೂವೆ ಥರದ ಅಸಂಖ್ಯಾತ ಗೀತೆಗಳು ಹೊಮ್ಮಿದ್ದೇ ಬೆಲೆಕಟ್ಟಲಾಗದ ಆ ನಿಮ್ಮ ಕಂಠದಿಂದ.

ಗುರುಶಿಷ್ಯರು ಚಿತ್ರದ 'ದೊಡ್ಡವರೆಲ್ಲಾ ಜಾಣರಲ್ಲ', ಬೆಂಕಿಯಲ್ಲಿ ಅರಳಿದ ಹೂ ನಲ್ಲಿ 'ತಾಳಿಕಟ್ಟುವ ಶುಭವೇಳೆ', ಶ್ರೀರಾಮಚಂದ್ರದ 'ಸುಂದರಿ ಸುಂದರಿ', ಭೂತವಿಲ್ಲ ಪಿಶಾಚಿಯಿಲ್ಲ, ಹಬ್ಬ ಚಿತ್ರದ 'ಮಾಮ ಮಾಮ ಮಸ್ತಿ'... ಹೀಗೆ ಹಾಡಿದ ಅಸಂಖ್ಯ ಗೀತೆಗಳಲ್ಲೇ ವಿಭಿನ್ನ ವಿಶಿಷ್ಟ ಗೀತೆಗಳ ಪಟ್ಟಿ ಬೇರೆ!!!. ಒಂದು ವೇಳೆ ಯಾವುದೋ ಒಂದು ಸಂಗೀತ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಯುವಕ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರನ್ನು ಅಂದು ಘಂಟಸಾಲರವರು ಆಯ್ಕೆ ಮಾಡದಿದ್ದರೆ ದೇಶ ಓರ್ವ ಸ್ವರ ಮಾಂತ್ರಿಕನನ್ನೇ ಕಳೆದುಕೊಳ್ಳುತ್ತಿತ್ತು ಅಂತ ಅನಿಸುತ್ತೆ.

ಎಲ್ಲ ಸಾಧಕರಂತೆ ಎಸ್.ಪಿ. ಬಿ ಅವರೂ ಸಹ ಬದುಕಿನ ಏರುಪೇರು ಕಂಡವರೆ. ಜೀವದ ಗೆಳೆಯರಂತಿದ್ದ ಅದೆಷ್ಟೋ ಹಿಟ್ ಗೀತೆಗಳನ್ನ 4 ಭಾಷೆಗಳಲ್ಲಿ ಕೊಟ್ಟಿದ್ದ ಎಸ್.ಪಿ. ಬಿ–ಇಳಯರಾಜ ಜೋಡಿ ಸಹ ಇನ್ನಿಲ್ಲದ ವೈಮನಸ್ಸು ಕಂಡಿತ್ತು. ಒಮ್ಮೆಯಂತೂ ಎಸ್.ಪಿ. ಬಿ ಅವರಿಗೆ ಯಾವುದೇ ವೇದಿಕೆಯಲ್ಲಾಗಲೀ ಅಥವಾ ಲೈವ್ ಶೋ ಗಳಲ್ಲಾಗಲೀ ತನ್ನ ಹಾಡುಗಳನ್ನು ಹಾಡಬಾರದು ಎಂದು ಇಳಯರಾಜ ಕೋರ್ಟ್ ನೋಟಿಸ್ ಕೊಡಿಸಿದ್ದರು.

ಇನ್ನು ಕನ್ನಡದ ಯಶಸ್ವೀ ಜೋಡಿ ಹಂಸಲೇಖ ಮತ್ತು ಎಸ್.ಪಿ. ಬಿ ಜೋಡಿ ಸಹ ಖ್ಯಾತಿಯ ಉತ್ತುಂಗದಲ್ಲಿದ್ದಾಗಲೇ ಬಿರುಕು ಬಿಟ್ಟಿತ್ತು. ಅಂದರೆ 1993 ರಲ್ಲಿ ರವಿಚಂದ್ರನ್ ನಟನೆಯ 'ಗಡಿಬಿಡಿ ಗಂಡ' ಚಿತ್ರದ ಹೊತ್ತಿಗೆ ಇಬ್ಬರ ವೈಮನಸ್ಸು ಎಷ್ಟಾಗಿತ್ತೆಂದರೆ ಎಸ್.ಪಿ. ಬಿ ಬಿಟ್ಟು ಬೇರೆಯವರಿಂದಲೇ ಹಾಡಿಸಬೇಕೆಂಬ ನಿರ್ಧಾರಕ್ಕೆ ಹಂಸಲೇಖ ಬಂದಿದ್ದರು. ಇನ್ನು ಈ ಹಂಸಲೇಖ ಸಹವಾಸವೇ ಬೇಡವೆಂದು ಎಸ್.ಪಿ. ಬಿ ಅಂದುಕೊಂಡಿದ್ದರು. ಆ ಚಿತ್ರದಲ್ಲಿನ ಸುಪ್ರಸಿದ್ಧ "ನಾನು ನಾನೇ ಇಲ್ಲಿ ನೀನು ನೀನೇ" ಅನ್ನೋ ಗೀತೆಗೆ ಎರಡು ಧ್ವನಿಗಳಲ್ಲಿ ಒಂದು ಧ್ವನಿಯಾಗಿ ತಮಿಳಿನ ಗಾಯಕ ಮನು ಅವರನ್ನೂ ಸಹ ಹಂಸಲೇಖ ಗೊತ್ತು ಮಾಡಿದ್ದರು. ಇನ್ನೊಂದು ಧ್ವನಿಯ ಹುಡುಕಾಟದಲ್ಲಿದ್ದಾಗಲೇ ನಿರ್ಮಾಪಕರಾದ ಕೆ. ಕೃಷ್ಣ ಮೋಹನ್ ಎಂಬುವವರು ಸುತರಾಂ ಒಪ್ಪದೇ ಎಸ್.ಪಿ. ಬಿ ಅವರೇ ಹಾಡಬೇಕೆಂದು ಹಠಹಿಡಿದರು. ಕೊನೆಗೆ ನಿರ್ಮಾಪಕರೇ ಹೋಗಿ ಎಸ್.ಪಿ. ಬಿ ಅವರನ್ನು ಒಪ್ಪಿಸಿ ರೆಕಾರ್ಡಿಂಗ್‌ಗೆ ಕರೆತಂದರು. ಆದರೆ ಹಾಡಿನ ಮೊದಲ ಸಾಲು "ನಾನು ನಾನೇ ನೀನು ನೀನೇ" ಅಂತ ಓದಿದ ಬಾಲಸುಬ್ರಹ್ಮಣ್ಯಂ ಅವರಿಗೆ ನನ್ನ ಮೇಲೆ ಉದ್ದೇಶಪೂರ್ವಕವಾಗಿಯೇ ಈ ಹಾಡು ಬರೆದಿದ್ದಾರೆಂದು ಇನ್ನೂ ಸಿಟ್ಟು ನೆತ್ತಿಗೇರಿತು. ಆದರೆ ಸಂಪೂರ್ಣವಾಗಿ ಹಾಡು ಓದಿದ ಮೇಲೆ ಸಮಾಧಾನವಾಯಿತು. ಕೊನೆಗೆ ಅಷ್ಟೇ ಅದ್ಭುತವಾಗಿ ಎರಡು ಧ್ವನಿಗಳಲ್ಲಿ ಹಾಡಿ ಮುಗಿಸಿದರು.

ಆದರೆ 90ರ ದಶಕ ಮಧ್ಯಭಾಗದಿಂದ ಯಾವಾಗ ರಾಜೇಶ್ ಕೃಷ್ಣನ್ ಮತ್ತು ಕನ್ನಡಕ್ಕೆ ಸೋನು ನಿಗಮ್, ಉದಿತ್ ನಾರಾಯಣ್, ಹರಿಹರನ್ ಪ್ರವೇಶವಾಯ್ತೋ ಆಗ ಕೆಲವೊಂದು ಒಳ್ಳೆಯ ಹಾಡುಗಳು ಎಸ್.ಪಿ. ಬಿ ಅವರಿಂದ ತಪ್ಪಿ ಹೋದವು. ಉದಾಹರಣೆಗೆ ಓಂ, ಜನುಮದ ಜೋಡಿ. ಅದರ ನಡುವೆಯೂ 1995 ರಲ್ಲಿ ಹಂಸಲೇಖ ಸಂಗೀತ ನಿರ್ದೇಶನದಲ್ಲಿ "ಗಾನಯೋಗಿ ಪಂಚಾಕ್ಷರಿ ಗವಾಯಿ" ಅನ್ನೋ ಚಿತ್ರದ ಗಾಯನಕ್ಕೆ ಆರನೇ ರಾಷ್ಟ್ರಪ್ರಶಸ್ತಿ ಬರುವ ಮೂಲಕ ಗಂಧರ್ವ ಗಾಯಕನ ಸಂಗೀತ ಬದುಕಿಗೊಂದು ಸಾರ್ಥಕತೆ ದೊರಕಿತ್ತು.

ಇನ್ನೊಂದು ವಿಶೇಷವೆಂದರೆ ರಜಿನಿಕಾಂತ್ ಎಸ್.ಪಿ. ಬಿ ಅವರನ್ನು ತನ್ನ ಅದೃಷ್ಟದ ಗಾಯಕನೆಂದೇ ಅಂದುಕೊಂಡಿದ್ದರು ತನ್ನ ಅಭಿನಯದ ಪ್ರತೀ ಚಿತ್ರದಲ್ಲೂ ಕನಿಷ್ಠ ಒಂದಾದರೂ ಹಾಡು ಬಾಲಸುಬ್ರಹ್ಮಣ್ಯಂ ಅವರಿಗೆ ಮೀಸಲಾಗಿರ್ತಿತ್ತು. ಇತ್ತೀಚಿನ ಕಾಲಾ ಹೊರತುಪಡಿಸಿ. (ಕಾಕತಾಳೀಯವೆಂಬಂತೆ ಕಾಲಾ ಇನ್ನಿಲ್ಲದಂತೆ ನೆಲಕಚ್ಚಿತ್ತು) ಅಲ್ಲದೇ ಕಮಲ್ ಹಾಸನ್‌ರ ಎಲ್ಲಾ ತೆಲುಗು ಚಿತ್ರಗಳಿಗೂ ಕಂಠದಾನ ಎಸ್.ಪಿ. ಬಿ ಅವರದ್ದೇ ಇದೆ. ಹೀಗೆ ಕಂಠದಾನ, ಗಾಯನ, ಸಂಗೀತ ನಿರ್ದೇಶನ, ನಟನೆ, ತೀರ್ಪುಗಾರಿಕೆ. ಮಾಡಿದ ಕಲಾ ಸೇವೆ ಒಂದೊಂದಲ್ಲ. ಕರ್ನಾಟಕದ ದತ್ತು ಪುತ್ರನಾಗಿದ್ದ ಇವರು ಮೂಲತಃ ಆಂಧ್ರದವರು ಇವರಿಗೇಕೆ ಇಷ್ಟೊಂದು ಗೌರವ, ಖ್ಯಾತಿ, ಹೊತ್ತು ಮೆರೆಸೋದು ಅಂಥ ಕನ್ನಡಿಗರಿಂದ ಅನ್ನಿಸಿಕೊಳ್ಳದೆ ಅಹಂ ಇಲ್ಲದ ಮನ ಕನ್ನಡ, ನುಡಿ ತೆಲುಗು, ಶರೀರಂ ತಮಿಳು ಎಂದೇ ಬದುಕಿದ ಅದ್ವಿತೀಯ ಜೀವ.

1975ರಲ್ಲಿ ಬೆಂಗಳೂರಿನ ಡಿ.ವಿ.ಜಿ. ರಸ್ತೆಯಲ್ಲಿ ಗಣೇಶೋತ್ಸವಕ್ಕೆ ಕಾರ್ಯಕ್ರಮ ನೀಡಲು ಬಂದಿದ್ದ ಎಸ್.ಪಿ. ಬಿ ಅವರಿಗೆ ಅಲ್ಲಿ ತನ್ನನ್ನು ನೋಡಲು ಕಿಕ್ಕಿರಿದು ಸೇರಿದ್ದ ಜನರ ಕರತಾಡನ, ಕಂಡು ಕೇಳರಿಯದ ಉತ್ಸಾಹ, ಜೊತೆಗೆ ತಾನು "ಹಾವಿನ ದ್ವೇಷ ಹನ್ನೆರಡು ವರುಷ" ಎಂದು ಹಾಡು ಶುರುಮಾಡಿದ್ದೇ ತಡ ನೆರೆದ ಜನರ ಜೋಶ್ ಮುಗಿಲು ಮುಟ್ಟಿತ್ತು. ಅದನ್ನು ನೋಡಿ ಬೆರಗಾಗಿ ಅಂದಿನವರೆಗೂ ಬರೀ ತೆಲುಗು ಅಥವಾ ತಮಿಳಿನಲ್ಲೇ ಮಾತನಾಡುತ್ತಿದ್ದ ಎಸ್.ಪಿ. ಬಿ ಮುಂದಿನ ಆರೇ ತಿಂಗಳಲ್ಲಿ ಕನ್ನಡ ಕಲಿತೇ ಬಿಟ್ಟರು ಹಾಗಿತ್ತು ಕನ್ನಡಿಗರ ಪ್ರತಿಕ್ರಿಯೆ.

ಎಸ್.ಪಿ. ಬಿ ಯವರ ಸ್ವರ ಸಾಮ್ರಾಜ್ಯದ ಬಣ್ಣದ ಬುಗುರಿಯಾಟ ಈಗ ನಿಂತಿರಬಹುದಷ್ಟೇ. ಕೇವಲ ಭೌತಿಕವಾಗಿ ನಿಂತ ಆಟ. ಅಗಲಿದಾಗ ಒಮ್ಮೆ ಸಂತಾಪ ಸೂಚಿಸಿ ಸುಮ್ಮನಾಗೋ ಗಾಯಕ ಅಲ್ಲ ನೀವು. "ವರ ಗಾಯಕ ಮತ್ತು ಅಮರ ಗಾಯಕ" ಎರಡೂ ನೀವೇ. ಏಳೇಳು ಜನ್ಮಗಳು ಕಳೆದರೂ ಅಳಿಯದಂತ ಕಲಾ ಸಾಧನೆ ಮಾಡಿದ್ದೀರಿ. ನೀವೇ ಹೇಳಿದ್ದೀರ ಸರ್. ನಿಮ್ಮ ಮುಂದಿನ ಜನ್ಮ ಕನ್ನಡ ನಾಡಲ್ಲೇ ಎಂದು.ಆದ್ದರಿಂದ "ಇದೇ ಭಾಷೆ ಇದೇ ನಾಡು ಎಂದೆಂದೂ ನಿಮ್ಮದಾಗಿರಲಿ".



**ಮಾಜಿ ರಾಷ್ಟ್ರಪತಿ ಶ್ರೀಮತಿ ಪ್ರತಿಭಾ ಪಾಟೀಲ್ ಅವರಿಂದ 'ಪದ್ಮ ಭೂಷಣ' ಪ್ರಶಸ್ತಿ ಸ್ವೀಕರಿಸುತ್ತಿರುವ ಎಸ್.ಪಿ. ಬಾಲಸುಬ್ರಹ್ಮಣ್ಯಂ (2011)**

***ಗಜಾನನ ಶರ್ಮ***

# ಸಂಗೀತದ ಲಯದಂತೆ ಹಾಸ್ಯವು ಹಾಸುಹೊಕ್ಕಾಗಿರುತ್ತದೆ

**-ಮಂಡ್ಯ ರಮೇಶ**



ನಮ್ಮನ್ನು ನಾವು ಹುಡುಕಿಕೊಳ್ಳುವುದಕ್ಕೆ, ಅನುಭವಿಸುವುದಕ್ಕೆ ಪುನನಿರ್ಮಿಸುವುದಕ್ಕೆ, ಅಹಂಕಾರಗಳನ್ನು ಮೆಟ್ಟಿ ಹಾಕುವುದಕ್ಕೆ, ಹಾಸ್ಯದ ಮೂಲಕ ಸಾಧ್ಯ. ಹಾಸ್ಯ ಮಾಡುವ ಗೆಳೆಯನಿದ್ದರೆ ಆಪ್ತತೆಯ ಭಾವನೆ ಉಂಟಾಗುತ್ತದೆ. ಪ್ರತಿ ನಿತ್ಯ ಜೀವನದಲ್ಲಿ, ಗಾಳಿಯಲ್ಲಿ, ದೇಹದಲ್ಲಿ, ಹಕ್ಕಿಯ ಇಂಚರದಲ್ಲಿ ಹಾಸ್ಯವಿದೆ. ನಾದದಲ್ಲಿದೆ, ಲಯದಲ್ಲಿದೆ, ಪ್ರಪಂಚದ ಅಣು ರೇಣು ತೃಣಕಾಷ್ಟತೆಯಲ್ಲಿದೆ ಎಲ್ಲದರಲ್ಲಿಯೂ ಹಾಸ್ಯವಿದೆ. ಸಂಗೀತದ ಲಯದಂತೆ ಹಾಸ್ಯವು ಹಾಸುಹೊಕ್ಕಾಗಿರುತ್ತದೆ. ಅದನ್ನು ಗಮನಿಸಿ ಗ್ರಹಿಸುವ, ಮತ್ತೆ ಮತ್ತೆ ಮೆಲುಕು ಹಾಕುವ ಮೂಲಕ ವಿಶಾಲ ಗುಣ, ವಿನೋದ ಪ್ರಜ್ಞೆ ಬೆಳೆಸಿಕೊಳ್ಳುವುದಾದರೆ ನಮ್ಮ ಕೈಗೆ ಎಟುಕುತ್ತದೆ. ಇಲ್ಲದೆ ಹೋದರೆ ಅದು ನಮಗೆ ದೊರೆಯುವುದಿಲ್ಲ ಎಂದು ಹಾಸ್ಯದ ಕುರಿತಾಗಿ ಮಾರ್ಮಿಕವಾಗಿ ಹಾಗೂ ಸವಿಸ್ತಾರವಾಗಿ ಖ್ಯಾತ ಹಾಸ್ಯ ನಟ, ನಿರ್ದೇಶಕ ಮಂಡ್ಯ ರಮೇಶ ಅವರು ಹೇಳಿದರು.

ದಿನಾಂಕ 20.09.2020 ರಂದು ನವದೆಹಲಿಯ ದಿನಕರ ಫೌಂಡೇಶನ್ ಇವರು ಹಮ್ಮಿಕೊಂಡಿದ್ದ ನಿಸ್ತಂತು ಮಾಧ್ಯಮ ಕಾರ್ಯಕ್ರಮ 'ನಾಟಕಗಳಲ್ಲಿ ಹಾಸ್ಯ' ಕುರಿತ ಸಂವಾದದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಜಗತ್ತು ಜನ್ಮ ತಾಳದಂದಿನಿಂದ ರಂಗಭೂಮಿಯ ಉಗಮವಾಯಿತು. ಆ ಕ್ಷಣವೇ ನಗೆಯು ಹುಟ್ಟಿಕೊಂಡಿತು. ಹಾಸ್ಯ ರಸದಿಂದ ನಗೆಯನ್ನು ಉತ್ಪತ್ತಿ ಮಾಡುವಂತ ಶಕ್ತಿ ಅದು. ಗ್ರೀಕ್ ನಾಟಕಗಳಲ್ಲಿ ಟ್ರ್ಯಾಜಿಡಿ ಕಾಣಸಿಗುತ್ತದೆ. ಅದೇ ತರಹ ಕಾಮಿಡಿ ಕಾಣಸಿಕೊಂಡಿದೆ. ನಕ್ಕು ನಕ್ಕು ಸುಸ್ತಾಗುವಂತಹ ಅನೇಕ ನಾಟಕಗಳು ಗ್ರೀಕ್‌ನಲ್ಲಿ ತುಂಬಾ ಇವೆ. ರೋಮನ ನಾಟಕಗಳಲ್ಲಿ ಹಾಸ್ಯದ ಹೊನಲೇ ಇದೆ. ಷೇಕ್ಸಪೀಯರ್ ಅದ್ಭುತವಾದ ಕಾಮಿಡಿ ನಾಟಕಗಳನ್ನು ಬರೆದಿದ್ದಾರೆ ಎಂದರು. ಎಲ್ಲಿಯರೆಗೆ ಪ್ರಪಂಚ ಇರುತ್ತದೆಯೋ ಅಲ್ಲಿಯವರೆಗೆ ಹಾಸ್ಯ ಇರುತ್ತದೆ ಎಂದರು. ತನ್ನಲ್ಲಿ ನೋವಿದ್ದಾಗ, ಸಂಕಟವಿದ್ದಾಗ ಅವನು ರಂಗದ ಮೇಲೆ ಬಂದು ಆ ದುಃಖ ದುಮ್ಮಾನಗಳನ್ನೆಲ್ಲಾ ಅವಿತಿಟ್ಟುಕೊಂಡು ತನ್ನನ್ನು ಪೂರ್ಣವಾಗಿ ಮರೆತು, ಪರಕಾಯ ಪ್ರವೇಶವಾಗಿ ರಸೋತ್ಪಾದನೆಗೆ ಶ್ರಮಿಕನಾಗಿ ಹಾಸ್ಯ ಉತ್ಪಾದನೆ ಮಾಡಿ, ಎದುರುಗಿದ್ದ ಪ್ರೇಕ್ಷಕನಿಗೆ ನಗಿಸುವ ಕ್ರಿಯೆ ಇದೆಯಲ್ಲಾ ಈ ಪ್ರಕ್ರಿಯೆ ತುಂಬಾ ಕಷ್ಟಕರವಾದದ್ದು, ತುಂಬಾ ಸವಾಲಿನದ್ದು, ಜಗತ್ತಿನಲ್ಲಿ ಶುದ್ಧ ಹಾಸ್ಯ ಹಾಗು ಶುದ್ಧ ಸಂಗೀತಕ್ಕೆ ಯಾವತ್ತೂ ವಿರೋಧಿಗಳಿಲ್ಲ. ಹಾಸ್ಯಕ್ಕೆ ದೊಡ್ಡ ಪ್ರೀತಿಯ ಕಾಣಿಕೆ ಜಗತ್ತಿನ ಯಾವುದೇ ಭಾಗದಲ್ಲೂ ಹೋದರೂ ಸಿಗುತ್ತೆ. ಸ್ವಯಂ ಹಾಗೂ ಅನುಭವ ವೇದ್ಯವಾದ ಸಂಗತಿಯಾಗಿದೆ ಎಂದರು.

ಪೌರಾಣಿಕ, ಇತಿಹಾಸದಲ್ಲೂ ಹಾಸ್ಯವನ್ನು ಕಾಣಬಹುದಾಗಿದೆ ಎಂದು ದೃಷ್ಟಾಂತಗಳ ಮೂಲಕ ತಿಳಿಸಿಕೊಟ್ಟರು. ಸಂಸ್ಕೃತ ನಾಟಕಗಳಲ್ಲಿನ ಹಾಸ್ಯದ ಕುರಿತು ಸವಿವರವಾಗಿ ತಿಳಿಸಿದರು.

ಪ್ರತಿನಿತ್ಯದ ಬದುಕಿನಲ್ಲಿ ಜರುಗುವ ಎಲ್ಲಾ ಪ್ರಸಂಗಗಳಲ್ಲೂ ಹಾಸ್ಯವನ್ನು ಹುಡುಕುವ ವಿನೋದ ಪ್ರಜ್ಞೆ ಅಂತರ್ಗತವಾಗಿರುತ್ತದೆ. ಜೀರ್ಣಿಸಬಲ್ಲ, ಅವಮಾನ ಸಹಿಸಿಕೊಳ್ಳಬಲ್ಲ ಗುಣ ಅಡಕವಾಗಿರುತ್ತದೆ. ಹಾಸ್ಯಕ್ಕೆ ವಿಶಿಷ್ಟವಾದ ಸ್ಥಾನವಿದೆ. ಅರ್ಥೈಸಿಕೊಳ್ಳುವಿಕೆ ಹಾಗು ಜೀವನದಲ್ಲಿ ಅಳವಡಿಸಿಕೊಳ್ಳುವಿಕೆ ಅಗತ್ಯ. ಪ್ರತಿಯೊಬ್ಬರಿಗೂ ಹಾಸ್ಯ ಪ್ರಜ್ಞೆ ಬೇಕು. ಹಾಗಾಗಿ ಹಾಸ್ಯ ರಸಕ್ಕೆ ದೊಡ್ಡ ಪ್ರಪಂಚನೆ ಸೃಷ್ಟಿಸಿದೆ. ಪುರಾಣ ಮತ್ತು ಇತಿಹಾಸಗಳಲ್ಲಿ ಅನೇಕ ತರಹದ ಹಾಸ್ಯ ಪ್ರಸಂಗಗಳಿವೆ ಎಂದರು.

ಎಲ್ಲರೂ ಇಷ್ಟಪಡುವ, ಗಮನಿಸುವ ಸರ್ವಶ್ರೇಷ್ಠವಾದ ರಸ ಅದುವೇ ಹಾಸ್ಯ ರಸ. ಎಲ್ಲ ರಸಗಳಲ್ಲೂ ಅದರದ್ದೆಯಾದ ಭಾವನೆಗಳಿರುತ್ತವೆ. ಹಾಸ್ಯದಲ್ಲಿ ಮಾತ್ರ ಸ್ವಲ್ಪ ಮಟ್ಟಿಗೆ ಈ ಭಾವ ಕಡಿಮೆ ಎಂದು ಹೇಳಬಹುದು ಎಂದರು.

ಕಲಾವಿದ ತನ್ನನ್ನು ತಾನು ಒಡೆದುಕೊಳ್ಳುವ ಮನೋಗುಣ ಬೆಳೆಸಿಕೊಳ್ಳಬೇಕು ಎಂದರು. ತನ್ನನ್ನು ಒಡೆದುಕೊಳ್ಳುವುದರ ಜೊತೆಗೆ ತನ್ನನ್ನು ತಾನು ಅಪಹಾಸ್ಯಮಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ತಿರುಗಿ ಕಟ್ಟಿಕೊಳ್ಳುವುದು ಕಷ್ಟ. ಒಡೆದು ನೋಡಿದಾಗ ಒಳಗಿನ 'ಹೂರಣದ ತೊಳೆ' ದೊರೆಯುತ್ತದೆ ಎಂದರು.

ಕನ್ನಡ ವೃತ್ತಿ ರಂಗಭೂಮಿಗೆ ಟಿ.ಪಿ. ಕೈಲಾಸಂ ಅವರ ಕೊಡುಗೆ ಅನನ್ಯ ಹಾಗೂ ಅಪಾರ. ತಮ್ಮ ಹಾಸ್ಯದ ಲೇಪನದ ಮೂಲಕ ವಿಶಿಷ್ಟವಾದ ಮೊನಚನ್ನು ಕೊಟ್ಟವರು ಟಿ.ಪಿ. ಕೈಲಾಸಂ ಅವರು. ಹಾಸ್ಯದ ಮೂಲಕ ಹೇಳುವ ಮಾತುಗಳು ಜನಸಾಮಾನ್ಯರ ಅರಿವಿಗೆ ಬೇಗನೆ ಪಡಮೂಡುತ್ತದೆ.

ರಾಜ ಹಾಸ್ಯ ಪ್ರಸಂಗದಿಂದ ಹುಟ್ಟುತ್ತದೆ ಎಂದರು. ಯಾವುದೋ ಒಂದು ಗಳಿಗೆ, ಉಸಿರಿನಲ್ಲಿ ಸೃಷ್ಟಿಯಾಗುವುದೇ ರಾಜ ಹಾಸ್ಯ. ಒಳ್ಳೆಯ ಹಾಸ್ಯದ ಸೃಷ್ಟಿಯೇ ಅಗತ್ಯದ ಬಗ್ಗೆ ನೋವು ಮರೆತು ಭಾವ ತುಂಬಿ ಅಭಿನಯ. ತನ್ನ ತಾನು ಅರಿತುಕೊಳ್ಳುವ ಪ್ರಕ್ರಿಯೆ ನಟನೆಗೆ ಬೇಕು. ಆ ಒಂದು ಪ್ರಕ್ರಿಯೆಯಲ್ಲಿ ತಾವು ಕಂಡುಂಡ ಅನುಭವದ ನೆಲೆಗಟ್ಟಿನ ಆಧಾರದ ಮೇಲೆ ವಿಚಾರಗಳನ್ನು ಈ ದಿನಕರದ ಝೂಮ್ ಮೀಟಿಂಗ್ ವೇದಿಕೆಯ ಮೂಲಕ ಹಂಚಿಕೊಂಡರು.

ಒಳ್ಳೆಯ ಸದಭಿರುಚಿಯ ನಾಟಕಗಳಿಗೆ ಇಂದಿಗೂ ಪ್ರೇಕ್ಷಕರ ಒಲವಿದೆ. ವಿಚಾರಗಳನ್ನು ನೀಡುವ ನಾಟಕಗಳ ಪ್ರಸ್ತುತಿ ಅವಶ್ಯಕ. ಅಭಿನಯ ಬೇರೆ, ಅನುಭವ ಬೇರೆ. ಅನುಭವಿಸಿ ಅಭಿನಯಿಸಿದಾಗ ಶುದ್ಧ ಹಾಸ್ಯ ಹುಟ್ಟುತ್ತದೆ. ಆಡುಗ-ನೋಡುಗರ ಸಂಬಂಧ ಶ್ರೇಷ್ಟವಾಗಿರಬೇಕು. ಓರ್ವ ಕಲಾವಿದನಿಗೆ ಪ್ರಾಪಂಚಿಕ ಹಾಗೂ ಪ್ರಚಲಿತ ವಿದ್ಯಮಾನಗಳ ಆಗು-ಹೋಗುಗಳ ಬಗ್ಗೆ ಅರಿವಿರಬೇಕು. ತನ್ನ ಸುತ್ತ-ಮುತ್ತ ಪ್ರತಿ ನಿತ್ಯ ತಾನು ಕಂಡುಂಡ ಸಂಗತಿಗಳನ್ನು ಅನುಭವಿಸಿ ಅಭಿನಯಿಸುವ ಕಲೆ ಕರಗತ ಮಾಡಿಕೊಳ್ಳಬೇಕು ಎಂದರು. ಹಾಸ್ಯ ಕಲಾವಿದ ಬದುಕನ್ನು ಗಂಭೀರವಾಗಿ ನೋಡಿರಬೇಕು. ಒಳಗಿನ ನೋವಿನ ಕಥೆಗೆ ನಗುವಿನ ಕೌಶಲ್ಯದ ರೂಪ ಕೊಡಬೇಕು. ಸಾಹಿತ್ಯದ ಒಲವಿಲ್ಲದಿದ್ದರೆ ಒಳ್ಳೆಯ ನಟನಾಗುವುದು ಕಷ್ಟ. ಬುದ್ಧಿ ಜೀವಿಯಾಗಿರದೇ ಬುದ್ಧಿವಂತನಾಗಿರಬೇಕು. ವ್ಯವಹಾರ ಜ್ಞಾನ ಇರಬೇಕು. ಪ್ರಾಥಮಿಕ ಸಿದ್ಧತೆ ಬಹು ಮುಖ್ಯ. ಕಲಾವಿದ ತಾನು ಪರಿಪೂರ್ಣ ಆಗಬೇಕು. ಅಧ್ಯಯನಶೀಲನಾಗಿರಬೇಕು ಎಂದು ಹೇಳಿದರು. ಒಟ್ಟಾರೆ ಈ ಕಾರ್ಯಕ್ರಮದಲ್ಲಿ ಸುದೀರ್ಘ ಒಂದು ಗಂಟೆ ಕಾಲ ಹಾಸ್ಯದ ಕುರಿತು ಮಾತನಾಡಿದರು.

ಕಲಾವಿದರಿಗೆ ಸಮಯ ಪ್ರಜ್ಞೆ ಕುರಿತು ರಂಗ ನಿರ್ದೇಶಕ, ನಟ ಟಿ.ಎಂ. ಮೈಲಾರಪ್ಪ ಹಾಗೂ ಹಾಸ್ಯ ಹಾಗೂ ಹಾಸ್ಯಾಸ್ವದ ಕುರಿತು ಉಷಾ ಭರತಾದ್ರಿ ಅವರು ಕೇಳಿದ ಪ್ರಶ್ನೆಗಳಿಗೆ ಅತ್ಯಂತ ಮಾರ್ಮಿಕವಾಗಿ ಮಂಡ್ಯ ರಮೇಶ ಅವರು ಉತ್ತರಿಸಿದರು.

ಇಂತಹ ಕ್ಲಿಷ್ಟಕರ ಹಾಗೂ ಕಷ್ಟಕರ

ಸಂದರ್ಭದಲ್ಲಿ ಜೂಮ್ ಮೀಟಿಂಗ್ ಮೂಲಕ ತಮ್ಮ ತಮ್ಮ ಮನೆಯಲ್ಲಿದ್ದುಕೊಂಡು ಒಂದೆಡೆ ಸೇರಿ ನಮಗೆ ತಿಳಿದಂತಹ ವಿಷಯಗಳನ್ನು ಹತ್ತಾರು ಜನಗಳ ಮಧ್ಯೆ ಹಂಚಿಕೊಳ್ಳುವ ಪ್ರಯತ್ನ ಸದಭಿರುಚಿಯ ದ್ಯೋತಕ ಎಂದು ಹೇಳಿದರು.

ನಾಟಕ ಅನ್ನುವುದು ನವರಸಗಳ ರಸಾಯನವಾಗಿದೆ. ನಾಟಕದಲ್ಲಿ ಹಾಸ್ಯ ರಸದ ಸ್ಥಾನ ಅದು ಹೊಂದಿರಬೇಕಾದ ಮಹತ್ವದ ಕುರಿತು ಹಾಗೂ ಹಿಂದಿನ ನಾಟಕಗಳಲ್ಲಿ ರಾಜ ಹಾಸ್ಯವಿತ್ತು. ಇಂದಿನ ನಾಟಕಗಳಲ್ಲಿ ಅದರ ವ್ಯಾಪ್ತಿ ಹಾಗೂ ಅದು ತಾಳಿರುವ ಸ್ವರೂಪ, ಇಂದಿನ ಕಂಪನಿ ನಾಟಕಗಳಲ್ಲಿನ ಹಾಸ್ಯ ಹಾಗು ಅದರ ಬಳಕೆಯ ಇತಿ-ಮಿತಿಯ ಸಾಧ್ಯಾಸಾಧ್ಯತೆ, ಅನುಭವದ ನೆಲೆಗಟ್ಟಿನ ಆಧಾರದ ಮೇಲೆ ಹಾಸ್ಯ ಪಾತ್ರದ ಅಭಿನಯಕ್ಕೆ ಬೇಕಾಗುವ ಅರ್ಹತೆ, ಸಿದ್ಧತೆ ಹಾಗೂ ಅಳವಡಿಸಿಕೊಳ್ಳಬೇಕಾದ ಕೌಶಲ್ಯದ ಕುರಿತಾಗಿ ಹೀಗೆ ಹತ್ತು ಹಲವಾರು ಪ್ರಶ್ನೆಗಳ ಮೂಲಕ ದೆಹಲಿಯ ಹಿರಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಅವರು ಸಂವಾದಕ್ಕೆ ಇನ್ನಷ್ಟು ಮೆರಗು ನೀಡಿದರು.

ವಿಶಾಲ ಕಟ್ಟಿ ಅವರ ಗಣೇಶ ಸ್ತುತಿಯೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು. ಸಂತೋಷ ಕುಮಾರ್ ಉಪಾಧ್ಯಾಯ ಅವರು ಕಾರ್ಯಕ್ರಮ ನಿರೂಪಿಸಿದರು. ರಮೇಶ ಟಿ.ಎಸ್. ಅವರು ತಾಂತ್ರಿಕ ನಿರ್ವಹಣೆ ಹಾಗೂ ವಂದನಾರ್ಪಣೆ ಮಾಡಿದರು. 'ದಿನಕರ' ಕಲಾವಿದರು ಈ ಸಂವಾದ ಕಾರ್ಯಕ್ರಮಕ್ಕೆ ಸಹಾಯ ಹಾಗು ಸಹಕಾರ ನೀಡಿದರು. ಜೂಮ್ ಮೀಟಿಂಗ್ ಮೂಲಕ ನಡೆದ ಈ ಕಾರ್ಯಕ್ರಮದಲ್ಲಿ ದೆಹಲಿ ಎನ್.ಸಿ.ಆರ್. ಹಾಗೂ ಕರ್ನಾಟಕದಿಂದ ಪ್ರೇಕ್ಷಕರು ಭಾಗವಹಿಸಿ ಮೆಚ್ಚಿ ಪ್ರಶಂಸೆ ವ್ಯಕ್ತಪಡಿಸಿದರು.

**ಟಿ.ಎಸ್. ರಮೇಶ**

# ರನ್ನನ ಗದಾಯುದ್ಧದಲ್ಲಿ ನಾಟಕೀಯ ಅಂಶಗಳು

## ಸಂವಾದ ಕಾರ್ಯಕ್ರಮ

ಕಲೆಗೆ, ಕಲಾವಿದನಿಗೆ ಭಾಷೆಯ ಹಂಗು ಮಾತ್ರವಲ್ಲ, ಕಾಲದ ಹಂಗಿಲ್ಲ ಎಂಬುವುದಕ್ಕೆ ಪ್ರಸ್ತುತ ಕಾಲಘಟ್ಟವೇ ಸಾಕ್ಷಿ. ಬಾಹ್ಯವಾಗಿ ಸೇರಲಾಗದಿದ್ದರೂ ಆಂತರಿಕವಾಗಿ ಅಂತರ್ ಜಾಲದ ಮೂಲಕ ಸದಾ ಮುಖಾಮುಖಿಯಾಗುವುದನ್ನು ಕಂಡಾಗ ಕಲೆ-ಕಲಾವಿದರದ್ದು ಬಿಡಿಸಲಾಗದ ಬಂಧ ಎಂಬುವುದು ಸಾಬೀತಾಗಿದೆ.

ಈ ನೆಲೆಯಲ್ಲಿ ಕಲಾವಿದರ ಆಸಕ್ತಿಗೆ ಸದಾ ವೇದಿಕೆ ಕಲ್ಪಿಸಿಕೊಡುವ ಸಂಘಟನೆ ದಿನಕರ ಫೌಂಡೇಶನ್, ನವದೆಹಲಿ ದೆಹಲಿಯ ಸಾಂಸ್ಕೃತಿಕ ಜಗತ್ತಿನಲ್ಲಿ ತನ್ನದೇ ಆದಂತಹ ಛಾಪನ್ನು ಮೂಡಿಸಿ ವೈಶಿಷ್ಟ್ಯಪೂರ್ಣವಾದ ಕಾರ್ಯಕ್ರಮಗಳನ್ನು ಸಂಘಟಿಸುತ್ತಿದೆ.

ದಿನಕರವು ದಿನಾಂಕ 27.09.2020ರಂದು ಅಂತರಜಾಲ ಅಂಗಳದಲ್ಲಿ 'ರನ್ನನ ಗದಾಯುದ್ಧ -ನಾಟಕೀಯ ಅಂಶಗಳು' ಸಂವಾದ ಕಾರ್ಯಕ್ರಮವನ್ನು ಆಯೋಜಿಸಿತ್ತು.

ಅಂದು ನಿವೃತ್ತ ಪ್ರಾಚಾರ್ಯರಾದ ಪ್ರೊ. ಎನ್.ಜಿ. ಕರೂರ, ವಿಜಯಪುರ ಅವರು 'ರನ್ನನ ಗದಾಯುದ್ಧ - ನಾಟಕೀಯ ಅಂಶಗಳು' ಕುರಿತಾಗಿ ಉಪನ್ಯಾಸ ನೀಡಿದರು. ಹತ್ತನೆಯ ಶತಮಾನದಲ್ಲಿ ಜೈನ ಧರ್ಮವು ಕನ್ನಡ ಸಾಹಿತ್ಯದಲ್ಲಿ ಪ್ರಭಾವಶಾಲಿಯಾಗಿತ್ತು. ವೀರಧರ್ಮದ ಯುಗವಾಗಿದ್ದರಿಂದ ಆ ಕಾಲದ ಜೈನ ಕವಿಗಳು ಕನ್ನಡ ಸಾಹಿತ್ಯದಲ್ಲಿ ವೀರರಸ ಪ್ರಧಾನವಾದ ಕೃತಿಗಳನ್ನು ರಚಿಸಿದರು. ಇಂತಹ ಪ್ರಮುಖ ಕೃತಿಗಳಲ್ಲಿ ರನ್ನನ ಗದಾಯುದ್ಧವೂ ಒಂದು. ರನ್ನನ ಗದಾಯುದ್ಧ ಕಾವ್ಯದ ತುಂಬಾ ನಾಟಕವೇ ಅಡಗಿ ಕುಳಿತಿದೆ. ದ್ರೌಪದಿ-ಭೀಮರ ಆಗಮನದಿಂದ ಭೀಮನ ಪಟ್ಟಾಭಿಷೇಕದವರೆಗೂ ಎಲ್ಲವೂ ನಾಟಕೀಯ ಪ್ರಧಾನ ಅಂಶಗಳೇ. ಪಾತ್ರಗಳು ಎದುರುಬದಿರಾಗಿ ನಿಂತು ವಾದ-ಪ್ರತಿವಾದಗಳನ್ನು ಮಾಡುತ್ತಾರೆ. ಇದು ಬರೀ ಸಂಭಾಷಣೆಯ ಕಾವ್ಯವಾಗಿರದೆ ಅಭಿನಯ ಪ್ರಧಾನವಾದ ಕಾವ್ಯ ಎಂದು ಹೇಳಿದರು.

ದ್ರೌಪದಿ ಸೇಡಿನ ಭಾವನೆಯನ್ನು ತೀರಿಸಿಕೊಳ್ಳುವ ಸಲುವಾಗಿ ಭೀಮನ ಹತ್ತಿರ ಬರುವುದು, ದುರ್ಯೋಧನ ರಣರಂಗವನ್ನು ಪ್ರವೇಶಿಸುವಾಗ ಎದುರಾಗುವ ಬೀಭತ್ಸವಾದ ಸನ್ನಿವೇಶ, ಅಭಿಮನ್ಯುವಿನ ಮೃತದೇಹವನ್ನು ಕಂಡು ದುರ್ಯೋಧನನ ದುಃಖ ಉಮ್ಮಳಿಸುವುದು, ದುರ್ಯೋಧನ ರಣರಂಗದಲ್ಲಿದ್ದ ಅಜ್ಜ ಭೀಷ್ಮನ ಬಳಿ ನಡೆಸುವ ಮಾತುಕತೆ ಹಾಗೂ ದುಯೋಧನನ ಭೀಮನ ಧ್ವನಿಗೆ ವೈಶಂಪಾಯನ ಸರೋವರದಿಂದ ಹೊರ ಬರುವಂತಹದ್ದು ಮುಂತಾದ ಸನ್ನಿವೇಶಗಳನ್ನು ವಿವರಿಸುತ್ತಾ ರನ್ನನ ಗದಾಯುದ್ಧ ಕಾವ್ಯವನ್ನು ರಸವತ್ತಾಗಿ ವ್ಯಾಖ್ಯಾನ ಗೊಳಿಸಿದರು. ಗಮಕಿಗಳಾದ ಶಂಭು ಭಟ್ ಹಾಗೂ ಬಿ. ಕೆ. ಜಲಜಾ ಅವರ ಸುಮಧುರ ಕಂಠದಿಂದ ಮೂಡಿಬಂದ ಗಮಕ ವಾಚನವು ಕಾರ್ಯಕ್ರಮಕ್ಕೆ ಮೆರುಗನ್ನು ನೀಡಿತು.



ಪ್ರೊ. ಎನ್.ಜಿ. ಕರೂರ



ಶ್ರೀ ಶಂಭು ಭಟ್



ಬಿ.ಕೆ. ಜಲಜಾ



ಶ್ರೀ ಶ್ರೀರಂಗ ಪರ್ವತೀಕರ್

ಶ್ರೀರಂಗ ಪರ್ವತೀಕರ್ ಪ್ರಾರ್ಥಿಸಿದರು. ಸಂತೋಷ್ ಕುಮಾರ್ ಉಪಾಧ್ಯಾಯ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದ ತಾಂತ್ರಿಕ ನಿರ್ವಹಣೆಯನ್ನು ರಂಗಾಸಕ್ತ ಟಿ.ಎಸ್. ರಮೇಶ್ ನಿರ್ವಹಿಸಿದರು. ಡಾ. ಕೆಂಗಲ್‌ಗುತ್ತಿ, ಸಿಂಪಿ ಹಾಗೂ ಸೌಮ್ಯ ಸಿಂಪಿ ಅವರು ಸಹಕರಿಸಿದರು. ಕಾರ್ಯಕ್ರಮ ಸಂಯೋಜಿಸಿದ ರಂಗಕರ್ಮಿ, ದಿನಕರ ಫೌಂಡೇಶನ್, ನವದೆಹಲಿ ಸಂಚಾಲಕ ಶಿವಾನಂದ ಇಂಗಳೇಶ್ವರ ಅವರು ವಂದಿಸಿದರು.

**ಅರವಿಂದ ಬಿಜ್ಜೈ**

# ಬಾಲಕ ಗಾಂಧಿಗೆ ದಂಡ ವಿಧಿಸಿದಾಗ

ಮಕ್ಕಳೇ, ನಿಮಗೆ ಗೊತ್ತೆ?. ಗಾಂಧೀಜಿಯವರು ಕೂಡಾ ಶಾಲೆಯಲ್ಲಿ ಕಲಿಯುತ್ತಿದ್ದಾಗ ಕ್ರೀಡಾ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದರು. ಅವರು ಶಾಲೆಯಲ್ಲಿದ್ದಾಗ ಅಲ್ಲಿ ಕ್ರೀಡಾ ಚಟುವಟಿಕೆಯಲ್ಲಿ ಭಾಗವಹಿಸುವುದು ಅಗತ್ಯವಾಗಿತ್ತು. ವಿದ್ಯಾರ್ಥಿಗಳು ಸಮಯಕ್ಕೆ ಸರಿಯಾಗಿ ಮೈದಾನವನ್ನು ತಲುಪದಿದ್ದರೆ, ಅವರಿಗೆ ದಂಡ ವಿಧಿಸಲಾಗುತ್ತಿತ್ತು. ಬಾಲಕ ಗಾಂಧಿಗೆ ಕ್ರೀಡೆಯ ಬಗ್ಗೆ ಹೆಚ್ಚಿನ ಆಸಕ್ತಿ ಇರಲಿಲ್ಲ ಆದರೆ ಸಮಯಕ್ಕೆ ಸರಿಯಾಗಿ ಮೈದಾನವನ್ನು ತಲುಪುತ್ತಿದ್ದನು. ಆ ಸಮಯದಲ್ಲಿ, ಮನೆಗಳಲ್ಲಿ ಗಡಿಯಾರಗಳು ಕಡಿಮೆ ಇರುತ್ತಿದ್ದವು ಮತ್ತು ಸಮಯವನ್ನು ಅಂದಾಜು ಮಾಡಿಕೊಂಡು ಶಾಲೆಗೆ ಹೋಗಬೇಕಾಗಿತ್ತು. ಒಂದು ದಿನ ಆಕಾಶವು ಮೋಡಗಳು ಕವಿದಿದ್ದವು. ಗಾಂಧಿಗೆ ಸಮಯದ ಬಗ್ಗೆ ಸರಿಯಾದ ಅಂದಾಜು ಬರಲಿಲ್ಲ ಮತ್ತು ಅವನು ಶಾಲೆಗೆ ತಲುಪಿದಾಗ ಕ್ರೀಡಾ ಚಟುವಟಿಕೆ ಮುಗಿದಿತ್ತು.ಎಲ್ಲಾ ವಿದ್ಯಾರ್ಥಿಗಳು ಹೊರಟು ಹೋಗಿದ್ದರು.



ಬಾಲಕ ಗಾಂಧಿ

ಇದನ್ನು ನೋಡಿ ಬಾಲಕ ಗಾಂಧಿ ತರಗತಿಗೆ ಮರಳಿದನು. ಅವನು ಮರುದಿನ ಶಾಲೆಗೆ ಬಂದಾಗ ಶಿಕ್ಷಕನು ನಿನ್ನೆ ಕ್ರೀಡಾ ಮೈದಾನವನ್ನು ಏಕೆ ತಲುಪಿಲ್ಲ ಎಂದು ಕೇಳಿದಾಗ ಗಾಂಧಿ ಈ ರೀತಿಯ ಉತ್ತರವನ್ನು ಕೊಟ್ಟನು. ನಾನು ನಿನ್ನೆ ಮೈದಾನಕ್ಕೆ ಬಂದಿದ್ದೆ ಸರ್, ಆದರೆ ಮೈದಾನದಲ್ಲಿ ಯಾವ ವಿದ್ಯಾರ್ಥಿಯೂ ಇರಲಿಲ್ಲ ಎಂದು ಹೇಳಿದನು. ಆಗ ಶಿಕ್ಷಕ 'ನೀವು ಯಾಕೆ ತಡವಾಗಿ ಬಂದಿದ್ದೀರಿ' ಸರಿಯಾದ ಸಮಯಕ್ಕೆ ಏಕೆ ಬರಲಿಲ್ಲ ಎಂದರು. ಆಗ ಈ ಗಾಂಧಿ, 'ನನ್ನ ಹತ್ತಿರ ಗಡಿಯಾರ ಇರಲಿಲ್ಲ ಮತ್ತು ನಿನ್ನೆ ಆಕಾಶದಲ್ಲಿ ಮೋಡದಿಂದಾಗಿ ಸಮಯ ಸರಿಯಾಗಿ ತಿಳಿಯಲಿಲ್ಲ ಎಂದು ಹೇಳಿದನು.

ಆಗ ಶಿಕ್ಷಕರು ಸುಳ್ಳು ಕಾರಣಗಳನ್ನು ನೀಡುತ್ತಿದ್ದಾರೆ ಎಂದು ಭಾವಿಸಿ ಗಾಂಧಿಗೆ ಅವರಿಗೆ ಎರಡು ಅಣೆಗಳ ದಂಡ ವಿಧಿಸಿದರು.ಇದನ್ನು ಕೇಳಿದಾಗ ಗಾಂಧಿ ಅಳಲು ಪ್ರಾರಂಭಿಸಿದನು. ದಂಡ ವಿಧಿಸಲಾಗಿದೆ ಎಂದು ಅವರು ಅಳಲಿಲ್ಲ. ತನ್ನ ಶಿಕ್ಷಕ ತನ್ನನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದರಿಂದ ಅವರಿಗೆ ಬೇಸರವಾಯಿತು. ಸತ್ಯವನ್ನು ಮಾತನಾಡುವಾಗಲೂ ಶಿಕ್ಷೆ ವಿಧಿಸಬಹುದು ಎಂದು ಅವರು ಭಾವಿಸಿದರು. ಅದೆ ತರಹ ತಪ್ಪು ಮಾಡಿದರೆ ಮತ್ತು ಸುಳ್ಳನ್ನು ಹೇಳಿದರೆ ಸಿಗಬಹುದಾದ ಇನ್ನೂ ಕಠಿಣ ಶಿಕ್ಷೆಯನ್ನು ಊಹಿಸಲು ಸಾಧ್ಯವಿಲ್ಲ ಎಂದು ಅರಿತರು.

ಈ ರೀತಿ ಯೋಚಿಸುತ್ತಾ, ಜೀವನದಲ್ಲಿ ಯಾವಾಗಲೂ ಸತ್ಯವನ್ನು ಹೇಳುತ್ತೇನೆ ಎಂದು ಎಂದು ಬಾಲ್ಯದಲ್ಲಿ ಗಾಂಧೀಜಿ ನಿರ್ಧರಿಸಿದ್ದರು. ಮಕ್ಕಳೇ, ಇದರಿಂದ ತಿಳಿಯುವ ನೀತಿ ಏನೆಂದರೆ ಜೀವನದಲ್ಲಿ ಸುಳ್ಳು ಹೇಳಬಾರದು. ಯಾವಾಗಲೂ ಸತ್ಯವನ್ನು ಹೇಳಬೇಕು.

***ಚಂದ್ರಶೇಖರ ಜೋಳದರಾಶಿ***



# ಹೋಗು.. ಎಲ್ಲಾದರೂ ಹೋಗು



ಗುಡ್ಡ ಬೆಟ್ಟಗಳ ದಟ್ಟಡವಿಯಲಿ
ಬೆಳೆದ ಸುಂದರ ಪವಿತ್ರ ಗಿಡಮರಗಳು
ಪಶು ಪಕ್ಷಿಗಳು ಏನು ತಪ್ಪಿಗಾಗಿ ಈ ಭುವಿಯಲ್ಲಿ
ಜನ್ಮವೆತ್ತಿದರು? ಸೃಷ್ಟಿ ಕರ್ತನಿಗೆ ಮುಂಚೆ ಅರಿವಿರಲಿಲ್ಲವೇ
ನಿರಾಶ್ರಿತರಿಗೆ ಶಾಂತಿ ವಿಶ್ರಾಂತಿ ಇಲ್ಲದಂತೆ ಸ್ವಾರ್ಥಿ
ಮಾನವ ಏನೆಲ್ಲಾ ಮಾಡುತ್ತಿರುವೆಯೋ? ಪಾಪಿ-ಪಾಪಪುಣ್ಯ
ನಿನಗೆ ಅರ್ಥವಾಗುತ್ತಿರಲಿಲ್ಲವೇ? ನನ್ನ ಅರಿವು ನಿಲವು
ನನಗೇ ಗೊತ್ತಿಲ್ಲದಂತಾಗಿದೆಯಲ್ಲವೇ.
ಸಾಕುಬೇಕುಗಳಿಗೆ ಮಿತಿಯೆಲ್ಲಿದೆ? ಇನ್ನೂ ಬೇಕು ಬೇಕೆಂದು
ಬಾಚಿಕೊಂಡು ನಿನಗೇ ಕೊಡಲಿ ಪೆಟ್ಟು ಹೊಡೆಕೊಂಡೆಯಲ್ಲೋ
ನೋಡೀಗ ಈ ಭೂಮಂಡಲಕ್ಕೆ ಆ ಅದೃಶ್ಯ 'ಕೊರೊನ'
ತನ್ನ ವಿಷ ಹರಡಿ ಹಾಹಾಕಾರದ ಕಿಚ್ಚು ಹರಡಿದೆ.
ಇದನ್ನರಿಯದೆ ಮನುಜ ಒದ್ದಾಡಿ ಗುದ್ದಾಡಿ, ಒಪ್ಪುನೆಪ್ಪಿಲ್ಲದೆ
ತಪ್ಪು ಮಾಡುತ್ತಲೇ ಬಂದಿರುವ ನಮಗೆ ಬುದ್ಧಿ
ಕಲಿಸಲು 'ಕೊರೊನ' ಇನ್ನೆಷ್ಟು ವಿಷ ಕಾರುವೆ ತಿಳಿಸು,
ನಿನ್ನನ್ನು ಅಟ್ಟುವುದೆಲ್ಲಿಗೆ ಈ ಭೂಮಂಡಲದಿಂದ
ನಿನ್ನನ್ನು ಸುಟ್ಟು ಹಾಕಲೂ ಜಾಗವಿರದಷ್ಟು ಹೆಚ್ಚಿಸುವೆಯಲ್ಲಾ
ಕರಗಳ ಜೋಡಿಸುವೆ ಕರುಣೆ ತೋರಿಸೋ
ಕೊರೊನಾ-ನೀ ನಮ್ಮನ್ನೆಲ್ಲಾ ಬಿಟ್ಟು ತೊಲಗು
ಹೋಗು-ಎಲ್ಲಾದರೂ ಹೋಗು-ಭೂಮಿ, ಆಕಾಶ, ನದಿ
ಸಾಗರ, ಕಾಡು ಮೇಡು, ಬೆಂಕಿ ಎಲ್ಲಾ ಬಿಟ್ಟು
ಬೇರೆ ಎಲ್ಲಾದರೂ ಹೋಗು-ಹೋಗು-ಹೋಗು
ವರವ ಬೇಡುವೆ ಪರಮಾತ್ಮ.

**ಡಾ. ಅಹಲ್ಯಾಚಿಂತಾಮಣಿ**

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ಹೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING
Office :
C-95, Okhla Industrial Area
Phase-I, New Delhi – 110 020
Ph : 40520770
M : 9811104398, 9811604398

Delhi Karnataka Sangha Abhimata
Oct-2020, Vol. No.31, Issue No. 1, Price Rs.1/-
RNI Regn. No. 53405/91, DL-SW-1/4016/19-21
Date of Publication : Oct 8th / 9th, Posting Date :10th / 11th, Total Pages-20, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y



ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ
ಇರುವ ಕಲಾವಿದ ರಚಪ್ಪಾಜಿ ಅವರ ಕಲಾಚಿತ್ರ